ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ವಿದುರಾಶ್ವತ್ಥ

ಪ್ರಧಾನ ಸಂಪಾದಕರು
**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು
**ನರೇಂದ್ರಕುಮಾರ್ ಎಸ್.ಎಸ್.**

ಲೇಖಕರು
**ಡಾ. ಎಸ್.ಜಿ. ರಾಮದಾಸ ರೆಡ್ಡಿ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೮೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**VIDURASHWATH:** An Introduction Book on Places in Karnataka that Played a Major Role in the Freedom Struggle, Written by Dr. S.G. Ramadasa Reddy, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಎಸ್.ಜಿ. ರಾಮದಾಸ ರೆಡ್ಡಿ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೭೨

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೪೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಕೇಂದ್ರ ಸರ್ಕಾರವು 'ಆಜ಼ಾದಿ ಕಾ ಅಮೃತ ಮಹೋತ್ಸವ' ಕಾರ್ಯಕ್ರಮವನ್ನು ಭಾರತಾದ್ಯಾಂತ ವಿಶಿಷ್ಟವಾಗಿ ಆಚರಿಸುತ್ತಿದೆ. ದೇಶದ ಹಲವಾರು ಸಂಘ, ಸಂಸ್ಥೆಗಳು ಸ್ವಾತಂತ್ರ್ಯದ ೭೫ ವರುಷದ ಅಮೃತ ಮಹೋತ್ಸವ ಸಂದರ್ಭದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ಸಾವಿರಾರು ವೀರರು ಇಂದು ನಮ್ಮೊಂದಿಗೆ ಇಲ್ಲ. ಹಾಗಾಗಿ ಅವರ ಸ್ವಾತಂತ್ರ್ಯದ ಹೋರಾಟದ ಸಮಗ್ರ ಪರಿಚಯವನ್ನು ಅವಲೋಕಿಸಿ ಪ್ರಸ್ತುತ ಹಾಗೂ ಮುಂದಿನ ಯುವ ಪೀಳಿಗೆಗೆ ಮಾಹಿತಿಯನ್ನು ತಿಳಿಸಿ, ಪ್ರೇರೇಪಿಸುವ ಅನಿವಾರ್ಯತೆ ಇದೆ. ಈ ನಿಟ್ಟಿನಲ್ಲಿ ಐತಿಹಾಸಿಕವಾಗಿ ಸ್ವಾತಂತ್ರ್ಯ ಚಳುವಳಿಯ ಕಾಲದ ೭೫ ಪ್ರಮುಖ ಸ್ಥಳ ಹಾಗೂ ಘಟನೆಗಳನ್ನು ಗುರುತಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ೭೫ ಕಿರು ಹೊತ್ತಿಗೆಗಳಲ್ಲಿ ದಾಖಲಿಸುತ್ತಿರುವುದು ಅತ್ಯಂತ ಶ್ಲಾಘನೀಯ ಅಂಶವಾಗಿದೆ.

ದೇಶಭಕ್ತರು ಬ್ರಿಟಿಷರ ಗುಂಡಿಗೆ ಬಲಿಯಾಗಿ ಪ್ರಾಣಾರ್ಪಣೆ ಮಾಡಿದ್ದು ಈ ನೆಲದ ಜನರ ಅಪ್ರತಿಮ ದೇಶಭಕ್ತಿಗೆ ಹಾಗೂ ಬ್ರಿಟಿಷ್ ಆಡಳಿತದ ಬರ್ಬರತೆಗೆ ಸಾಕ್ಷಿಯಾಗಿದೆ. ಇಂತಹ ಬರ್ಬರತೆಗೆ ಸಾಕ್ಷಿಯಾದ ವಿದುರಾಶ್ವತ್ಥ ಘಟನೆಯೂ ಮೈಸೂರು ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯ ಕಿಚ್ಚನ್ನು ಹೊತ್ತಿಸಿ ಚಾಲಕ ಶಕ್ತಿಯಾಗಿ ಪರಿಣಮಿಸಿತು. ಸತ್ಯಾಗ್ರಹಕ್ಕೆ ನಾಂದಿ ಶಿವಪುರದಲ್ಲಾದರೂ ಅದು ಪ್ರಖರಗೊಂಡು ದಿಕ್ಕು ದಿಕ್ಕುಗಳಿಗೆ ವ್ಯಾಪಿಸಿದ್ದು ವಿದುರಾಶ್ವತ್ಥದಿಂದ. ವಿದುರಾಶ್ವತ್ಥ ಗ್ರಾಮವನ್ನು ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯ ಇತಿಹಾಸದ ಪುಟಗಳಲ್ಲಿ ಕರ್ನಾಟಕದ ಜಲಿಯನ್ ವಾಲಾಬಾಗ್ (ದಕ್ಷಿಣದ ಜಲಿಯನ್ ವಾಲಾಬಾಗ್) ಎಂದು ಗುರುತಿಸಲಾಗುತ್ತದೆ. ೧೯೧೯ರಲ್ಲಿ ಪಂಜಾಬಿನ ಅಮೃತಸರದ ಜಲಿಯನ್ ವಾಲಾಬಾಗ್ ಮೈದಾನದಲ್ಲಿ ನಡೆದಂತಹ ಒಂದು

ಹೃದಯವಿದ್ರಾವಕ ಘಟನೆ ೧೯೩೮ ರ ಏಪ್ರಿಲ್ ೨೫ ರಂದು ಕರ್ನಾಟಕದ ವಿದುರಾಶ್ವತ್ಥದಲ್ಲಿ ನಡೆಯಿತು.

ಅಲ್ಲಿಯವರೆಗೆ ದೇಶೀಯ ಸಂಸ್ಥಾನಗಳ ವಿಷಯದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ತಲೆ ಹಾಕಬಾರದೆಂಬ ಬಲವಾದ ಅಭಿಪ್ರಾಯವನ್ನು ಹೊಂದಿದ್ದ ಮಹಾತ್ಮ ಗಾಂಧೀಜಿಯವರು, ಏಪ್ರಿಲ್ ೨೫, ೧೯೩೮ರ ವಿದುರಾಶ್ವತ್ಥ ದುರಂತದ ತರುವಾಯ ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುವಂತೆ ಆಯಿತು. ರಾಷ್ಟ್ರಧ್ವಜದ ಬಗ್ಗೆ ಮೈಸೂರಿನಲ್ಲಿ ನಡೆಯುತ್ತಿರುವ ಚಳವಳಿ ಕಾಲ ಧರ್ಮಕ್ಕೆ ಅನುಗುಣವಾಯಿತು.

ಸ್ವರಾಜ್ಯ ೭೫ ರ ಅಂಗವಾಗಿ ರಚಿತವಾಗುತ್ತಿರುವ ಈ ಪುಸ್ತಕ ಮಾಲೆಯಲ್ಲಿ ನನ್ನನ್ನು ಗುರುತಿಸಿ ಚಿಕ್ಕಬಳ್ಳಾಪುರ ಜಿಲ್ಲೆಯ ವಿದುರಾಶ್ವತ್ಥದ ಬಗ್ಗೆ ಕಿರುಹೊತ್ತಿಗೆ ಬರೆಯಲು ಅವಕಾಶ ನೀಡಿದ ಘನ ಸರ್ಕಾರಕ್ಕೆ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಡಾ. ಬಿ.ವಿ. ವಸಂತಕುಮಾರ್ ಅವರಿಗೆ ಹಾಗೂ ರಿಜಿಸ್ಟ್ರಾರ್ ಆದ ಶ್ರೀ ಕರಿಯಪ್ಪನವರಿಗೆ, ಈ ಸಂಪುಟದ ಪುಸ್ತಕ ಮಾಲೆಯ ಸಂಪಾದಕರಾದ ಶ್ರೀ ಎಸ್.ಎಸ್. ನರೇಂದ್ರ ಕುಮಾರ್ ಅವರಿಗೆ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ ಹಾಗೂ ನನ್ನ ಎಲ್ಲಾ ಶೈಕ್ಷಣಿಕ ಪ್ರಗತಿಗೆ ಬೆನ್ನೆಲುಬಾಗಿರುವ ನನ್ನ ಕುಟುಂಬಕ್ಕೂ ಅನಂತ ವಂದನೆಗಳು.

ದಿನಾಂಕ: **ಡಾ. ಎಸ್ ಜಿ. ರಾಮದಾಸ ರೆಡ್ಡಿ**
೨೮.೧೨.೨೦೨೧

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಗಾಂಧೀಜಿಯವರು ಮಾತನಾಡುತ್ತಾ | ೧೫ |
| ಸ್ಥಳ ಪುರಾಣ | ೧೭ |
| ಚಾರಿತ್ರಿಕ ಹಿನ್ನೆಲೆ | ೧೮ |
| ೧೯೩೮ರ ಹರಿಪುರ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ | ೨೩ |
| ಶಿವಪುರದಲ್ಲಿ ಧ್ವಜಸತ್ಯಾಗ್ರಹ | ೨೪ |
| ಸ್ಥಳೀಯರ ಅಭಿಪ್ರಾಯಗಳು | ೩೩ |
| ಸರ್ಕಾರದ ವರದಿ | ೩೪ |
| ಪಟೇಲ್– ಮಿರ್ಜಾ ಒಪ್ಪಂದ – ೧೯೩೮ ಮೇ ೧೭ | ೩೮ |
| ಮಹಾತ್ಮ ಗಾಂಧೀಜಿಯವರ ಭೇಟಿ | ೪೦ |
| ವಿದುರಾಶ್ವತ್ಥದಲ್ಲಿ ಎರಡನೇ ಕಾಂಗ್ರೆಸ್ ಅಧಿವೇಶನ. ೧೯೩೯ ಏಪ್ರಿಲ್ ೧೭. | ೪೨ |
| ಸೆಪ್ಟೆಂಬರ್ ಒಂದರಂದು ಮೈಸೂರು ಚಲೋ | ೪೬ |
| ೧೯೩೮ರ ವಿದುರಾಶ್ವತ್ಥ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದವರ ಹೆಸರುಗಳು. | ೪೮ |

ಏಪ್ರಿಲ್ ೧೯೩೮ ರ ಅಧಿವೇಶನದಲ್ಲಿ ಭಾಗವಹಿಸಿದ
ಇತರ ಪ್ರಮುಖರು ೪೯

ಹತ್ಯಾಕಾಂಡವನ್ನು ವರದಿ ಮಾಡಿದ ಪತ್ರಿಕೆಗಳು ೪೯

ವಿದುರಾಶ್ವತ್ಥ ಸ್ವಾತಂತ್ರ್ಯ ಸ್ಮಾರಕ ೪೯

ಚಿತ್ರಪಟ ಗ್ಯಾಲರಿ. ೪೯

ವೀರ ಲಾವಣಿಗಳು ೫೦

ಶ್ರೀ ಕೆ. ಚೆಂಗಲರಾಯರೆಡ್ಡಿ ಅವರ ಅನಿಸಿಕೆ ೫೧

ವಿದ್ವಾಂಸರ ಅಭಿಪ್ರಾಯ ೫೨

ಸಮಾಜಸೇವಕರ, ಸ್ವಾತಂತ್ರ್ಯ ಹೋರಾಟಗಾರರ ಬೀಡು ೫೨

ಪರಾಮರ್ಶನ ಗ್ರಂಥಗಳು ೫೬

- ಅನುಬಂಧ
  ಛಾಯಾಚಿತ್ರಗಳು ೫೭
- ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೬೬


---

## ಗಾಂಧೀಜಿಯವರು ಮಾತನಾಡುತ್ತಾ

“ಧರ್ಮಕ್ಕೆ ವಿಜಯ ಎಂಬ ಅಚಲ ಶ್ರದ್ಧೆಯಿಂದ ಜೀವಿಸಬೇಕು, ಈ ಶ್ರದ್ಧೆಯಿಂದಲೇ ನಾನು ಜೀವಿಸುತ್ತಿದ್ದೇನೆ. ಕಾಯಾ–ವಾಚಾ–ಮನಸಾ ಅಹಿಂಸೆಯನ್ನು ಪಾಲಿಸಬೇಕು. ನೀವು ಜಯ ಪಡೆಯುವಿರಿ. ಮೈಸೂರಿಗೆ ಇದೇ ನನ್ನ ಸಂದೇಶ. ನನ್ನ ಆಶೀರ್ವಾದ ನಿಮಗಿದೆ. ದೇವರನ್ನು ಪ್ರಾರ್ಥಿಸಿರಿ. ಮೈಸೂರಿನ ನಾಗರಿಕರು ನೀವು ಜಯ ಪಡೆಯುವಿರಿ” ಎಂದಿದ್ದರು.

ಭಾರತದ ಸ್ವಾತಂತ್ರ್ಯ ಸಮರದಲ್ಲಿ ಕರ್ನಾಟಕದ ಪಾತ್ರ ಗಣನೀಯವಾದದ್ದು. ದೇಶಭಕ್ತರು ಬ್ರಿಟಿಷರ ಗುಂಡಿಗೆ ಬಲಿಯಾಗಿ ಪ್ರಾಣಾರ್ಪಣೆ ಮಾಡಿದ್ದು ಈ ನೆಲದ ಜನರ ಅಪ್ರತಿಮ ದೇಶಭಕ್ತಿಗೆ ಹಾಗೂ ಬ್ರಿಟಿಷ್ ಆಡಳಿತದ ಬರ್ಬರತೆಗೆ ಸಾಕ್ಷಿಯಾಗಿದೆ. ಸ್ವಾತಂತ್ರ್ಯ ಸಮರದಲ್ಲಿ ಕರ್ನಾಟಕದಲ್ಲಿ ನಡೆದ ಅತೀ ಭೀಕರ ಹತ್ಯಾಕಾಂಡಗಳಲ್ಲಿ ಒಂದಾದ ವಿದುರಾಶ್ವತ್ಥ ಗ್ರಾಮವನ್ನು ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯ ಇತಿಹಾಸದ ಪುಟಗಳಲ್ಲಿ ಕರ್ನಾಟಕದ ಜಲಿಯನ್‌ವಾಲಾಬಾಗ್ (ದಕ್ಷಿಣದ ಜಲಿಯನ್‌ವಾಲಾಬಾಗ್) ಎಂದು ಗುರುತಿಸಲಾಗುತ್ತದೆ. ೧೯೧೯ ರಲ್ಲಿ ಪಂಜಾಬಿನ ಅಮೃತಸರದ ಜಲಿಯನ್ ವಾಲಾಬಾಗ್ ಮೈದಾನದಲ್ಲಿ ನಡೆದಂತಹ ಒಂದು ಹೃದಯವಿದ್ರಾವಕ ಘಟನೆ ೧೯೩೮ ರ ಏಪ್ರಿಲ್ ೨೫ ರಂದು ಕರ್ನಾಟಕದ ವಿದುರಾಶ್ವತ್ಥದಲ್ಲಿ ನಡೆಯಿತು. ಈ ಘಟನೆ ನಂತರ ಇಡೀ ಸಂಸ್ಥಾನದಲ್ಲಿ ಚಳವಳಿಯ ದಿಕ್ಕೇ ಬದಲಾಯಿತು. ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳವಳಿಯ ಕಾವು ತೀವ್ರವಾದುದು ೧೯೩೮ರ ನಂತರ ಅದರಲ್ಲೂ ವಿದುರಾಶ್ವತ್ಥ ದುರಂತದ ತರುವಾಯವೆನ್ನಬಹುದು.

ಅಲ್ಲಿಯವರೆಗೆ ದೇಶೀಯ ಸಂಸ್ಥಾನಗಳ ವಿಷಯದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ತಲೆ ಹಾಕಬಾರದೆಂಬ ಬಲವಾದ ಅಭಿಪ್ರಾಯವನ್ನು ಹೊಂದಿದ್ದ ಮಹಾತ್ಮ ಗಾಂಧೀಜಿಯವರು ವಿದುರಾಶ್ವತ್ಥ ದುರಂತದ ತರುವಾಯ ತಮ್ಮ

ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುವಂತೆ ಆಯಿತು. ರಾಷ್ಟ್ರಧ್ವಜದ ಬಗ್ಗೆ ಮೈಸೂರಿನಲ್ಲಿ ನಡೆಯುತ್ತಿರುವ ಚಳವಳಿ ಕಾಲ ಧರ್ಮಕ್ಕೆ ಅನುಗುಣವಾಯಿತು.

ವಿದುರಾಶ್ವತ್ಥದಂತಹ ಸಣ್ಣ ಸಣ್ಣ ಪ್ರದೇಶಗಳಲ್ಲೂ ಕೂಡ ಭಾರತಾಂಬೆಯ ಬಿಡುಗಡೆಗಾಗಿ ಹರತಾಳಗಳು, ಮೆರವಣಿಗೆಗಳು, ಜಾಥಾ, ಪಿಕೆಟಿಂಗ್, ಬಹಿಷ್ಕಾರದಂತಹ ಹೋರಾಟ ನಡೆದಿದ್ದು ಸಮಾಜದ ಎಲ್ಲಾ ವರ್ಗದ ಜಾತಿಗಳು, ಧರ್ಮಗಳು ಮೇಲು ಕೀಳು ಎಂದು ಎಣಿಸದೆ ಸ್ವಾತಂತ್ರ್ಯದ ಹೋರಾಟದಲ್ಲಿ ಪಾಲ್ಗೊಂಡು ಸ್ವಾತಂತ್ರ್ಯಕ್ಕಾಗಿ ತಮ್ಮ ಅಮೂಲ್ಯ ಸೇವೆ ಸಲ್ಲಿಸಿರುವುದನ್ನು ನಾವು ಗಮನಿಸಬಹುದು. ಅಂತಹ ಹೋರಾಟಗಾರರ ದೇಶ ಸೇವೆಯನ್ನು ನೆನೆದು ಅದನ್ನು ಮುಂದಿನ ಪೀಳಿಗೆಗೆ ತಿಳಿಸುವ ಸಣ್ಣ ಪ್ರಯತ್ನ ಇದಾಗಿದೆ.

ಸ್ವಾತಂತ್ರ್ಯ ಹೋರಾಟವನ್ನು ಮೂರು ಹಂತಗಳಲ್ಲಿ ನಾವು ಕಾಣಬಹುದಾಗಿದೆ. ದೇಶಿಯ ರಾಜರು ಬ್ರಿಟಿಷರ ವಿರುದ್ಧ ಹೋರಾಡಿದ್ದು, ದೇಶಪ್ರೇಮಿಗಳು ಸ್ವತಂತ್ರ ಪ್ರಿಯ ವೀರ ಸರದಾರರು, ಪಾಳೆಯಗಾರರು ಮತ್ತು ಇತರರು ಬ್ರಿಟಿಷರ ವಿರುದ್ಧ ಸಶಸ್ತ್ರ ಬಂಡಾಯವೆದ್ದು ಅವರ ಗುಂಡಿಗೆ ಎದೆಒಡ್ಡಿದ್ದು, ಕಾಂಗ್ರೆಸ್ ಮತ್ತು ಗಾಂಧೀಜಿ ಅವರ ನೇತೃತ್ವದ ಅಹಿಂಸಾತ್ಮಕ ಸ್ವಾತಂತ್ರ್ಯ ಹೋರಾಟ ನಡೆದಿದ್ದು ಎಂದು ಹೇಳಬಹುದು.

ವಿದುರಾಶ್ವತ್ಥ ಗ್ರಾಮ ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆ (ಹಿಂದೆ ಕೋಲಾರ ಜಿಲ್ಲೆಯ) ಗೌರಿಬಿದನೂರು ತಾಲ್ಲೂಕಿನ ಬಳಿಯಿರುವ ಒಂದು ಯಾತ್ರಸ್ಥಳವಾಗಿದೆ. (ದೊಡ್ಡ ಕುರುಗೋಡು ಎಂಬುದು ಗ್ರಾಮದ ಮೂಲ ಹೆಸರು) ಗ್ರಾಮವು ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿಬೆಟ್ಟದ ವಾಯುವ್ಯದಲ್ಲಿರುವ ಚನ್ನಕೇಶವ ಬೆಟ್ಟದಲ್ಲಿ ಹುಟ್ಟಿ ಹರಿಯುವ ಉತ್ತರ ಪಿನಾಕಿನಿ ನದಿಯ ದಡದಲ್ಲಿದೆ. ಬೆಂಗಳೂರಿನಿಂದ ೫೦ ಮೈಲಿ ದೂರದಲ್ಲಿದೆ. ವಿದುರಾಶ್ವತ್ಥ ಕ್ಷೇತ್ರ ಪುರಾತನ ಅಶ್ವತ್ಥನಾರಾಯಣಸ್ವಾಮಿಯ ದೇವಾಲಯ ಮತ್ತು ಸುಬ್ರಹ್ಮಣ್ಯಸ್ವಾಮಿಯ ಸನ್ನಿಧಾನವಿರುವ ಪವಿತ್ರಭೂಮಿ. ಭಾರತದ ಸತ್ಯಾಗ್ರಹೀ ಸ್ವಾತಂತ್ರ್ಯ ಹೋರಾಟಗಾರರ ನೆಲೆವೀಡು. ಭೌಗೋಳಿಕವಾಗಿ ಈ ಭೂಭಾಗವು ನೈಸ್‌ಕಣಶಿಲೆಯ ಪ್ರದೇಶವಾಗಿದೆ ಹಾಗೂ ಭೂವಿಕಾಸದ ಆರ್ಕಿಯನ್‌ದ ಕೊನೆಯ ಕಾಲಕ್ಕೆ ಸೇರಿದ ಭಾಗವಾಗಿದೆ. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದ ಶೇ ೧೨.೬೪ ರಷ್ಟು ಅರಣ್ಯವಿರುವ ಭೂಪ್ರದೇಶವಾಗಿದೆ.



ವಿದುರಾಶ್ವತ್ಥ ಗ್ರಾಮದಲ್ಲಿ ಪ್ರತಿ ವರ್ಷವೂ ಚೈತ್ರಶುದ್ಧ ಪೂರ್ಣಿಮೆಯ ದಿನದಂದು ಪ್ರಾರಂಭವಾಗಿ ನಡೆಯುವ ಅಶ್ವತ್ಥನಾರಾಯಣಸ್ವಾಮಿಯ ಜಾತ್ರೆ ಏಳು ದಿನಗಳು ನಡೆಯುವುದು ವಾಡಿಕೆಯಾಗಿತ್ತು. ಪರಿಣಾಮವಾಗಿ ಮೈಸೂರು ಕಾಂಗ್ರೆಸ್ ಪಕ್ಷ ಜಾತ್ರಾ ಮಹೋತ್ಸವದ ದಿನ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಒತ್ತಾಯಿಸಲು ೧೯೩೮ ಏಪ್ರಿಲ್ ೨೫ ರಂದು ಸಭೆ ನಡೆಸಲು ತೀರ್ಮಾನಿಸಿತು.

## ಸ್ಥಳ ಪುರಾಣ

ಮೈತ್ರೇಯ ಮಹಾ ಋಷಿಯಿಂದ ಸ್ಥಾಪಿತವಾದ ಮಹಾಭಾರತದ ಕುರುಕ್ಷೇತ್ರ ಯುದ್ಧದ ನಂತರ ಧೃತರಾಷ್ಟ್ರನ ಆಪ್ತಸಲಹೆಗಾರ, ಮಂತ್ರಿಯಾಗಿದ್ದ ವಿಧುರನು ಭಗವಾನ್ ಕೃಷ್ಣನ ಸಲಹೆಯ ಆಧಾರದ ಮೇಲೆ ಮೋಕ್ಷವನ್ನು ಪಡೆಯಲು ಉಪಖಂಡದಾದ್ಯಂತ ಪ್ರಯಾಣಿಸಿದನು. ಅವನು ಈ ಸ್ಥಳಕ್ಕೆ ಆಗಮಿಸಿ ಮೈತ್ರೇಯ ಋಷಿಯ ಆಶ್ರಮದಲ್ಲಿ ಉಳಿದುಕೊಂಡು ಉತ್ತರ ಪಿನಾಕಿನಿ ನದಿಯ ದಡದಲ್ಲಿ ಪ್ರಾರ್ಥಿಸಿದನು. ಒಮ್ಮೆ ಪ್ರಾತಃಕಾಲದ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದಾಗ ನದಿಯಲ್ಲಿ ಅಶ್ವತ್ಥವೃಕ್ಷದ ಸಸಿ ತೇಲುತ್ತಿರುವುದನ್ನು ಕಂಡನು. ಅದನ್ನು ನದಿಯ ದಡದಲ್ಲಿ ನೆಟ್ಟು ಭಕ್ತಿಯಿಂದ ಪೂಜಿಸಿದನು. ಅವನ ಭಕ್ತಿಯಿಂದ ಸಂತುಷ್ಟರಾದ ಬ್ರಹ್ಮ, ವಿಷ್ಣು ಮತ್ತು ಶಿವರು ಅವನ ಮುಂದೆ ಕಾಣಿಸಿಕೊಂಡರು ಮತ್ತು ಮೋಕ್ಷವನ್ನು ಅನುಗ್ರಹಿಸಿದರು. ವಿಧುರನು ಇಲ್ಲಿ ಅಶ್ವತ್ಥವೃಕ್ಷವನ್ನು ನೆಟ್ಟು ಮೋಕ್ಷವನ್ನು ಪಡೆದಿದ್ದರಿಂದ ಈ ಸ್ಥಳಕ್ಕೆ ವಿದುರಾಶ್ವತ್ಥ ಎಂಬ ಹೆಸರು ಬಂದಿದೆ ಎಂಬ ಪ್ರತೀತಿ ಇದೆ.

ವಿದುರಾಶ್ವತ್ಥದ ಅಶ್ವತ್ಥಮರಕ್ಕೆ (ಆಲದಮರ) ಹೆಸರುವಾಸಿಯಾದ ಒಂದು ಸಣ್ಣ ಹಳ್ಳಿಯಾಗಿದೆ. ಬ್ರಹ್ಮ, ವಿಷ್ಣು ಮತ್ತು ಶಿವನಿಗೆ ಸಮರ್ಪಿತವಾದ ದೇವಾಲಯವಿದೆ ಮತ್ತು ಅಶ್ವತ್ಥವೃಕ್ಷವು ಈ ಮೂರು ಭಗವಂತರನ್ನು ಮರದ ಮೂರು ಭಾಗಗಳಿಂದ ಪ್ರತಿನಿಧಿಸುತ್ತದೆ ಎಂದು ನಂಬಲಾಗಿದೆ, ಕೆಳಗಿನ ಭಾಗವು ಬ್ರಹ್ಮನಿಂದ (ಬೇರುಗಳು), ಮಧ್ಯ ಭಾಗ (ಕಾಂಡ) ವಿಷ್ಣು ಮತ್ತು ಮೇಲಿನ

ಭಾಗ ಶಿವನಿಂದ (ಮರದ ಕೊಂಬೆಗಳು, ಎಲೆಗಳು) ದೇವಾಲಯದ ಗೋಡೆಯ ಮೇಲೆ ಈ ಬಗ್ಗೆ ಕನ್ನಡದ ಶಾಸನವನ್ನು ಕಾಣಬಹುದು.

## ಚಾರಿತ್ರಿಕ ಹಿನ್ನೆಲೆ

ಜಿಲ್ಲೆಯು ಶಿಲಾಯುಗದ ಮಾನವನ ಕಾಲದಿಂದ ಪ್ರಸ್ತುತ ಕಾಲಮಾನದವರೆಗೆ ಜನವಸತಿ ಸ್ಥಳವಾಗಿದೆ. ವಿಶೇಷವಾಗಿ ಸಿಂಧೂ ನಾಗರಿಕತೆಯ ಹರಪ್ಪಾ ಮತ್ತು ಮೊಹೆಂಜೋದಾರೋ ನಿವೇಶನಗಳಲ್ಲಿ ದೊರಕಿರುವ ಚಿನ್ನವನ್ನು ದಕ್ಷಿಣ ಕೋಲಾರ ಚಿನ್ನದ ಗಣಿ ಪ್ರದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದರೆಂದು ೧೯೨೮ ರಲ್ಲಿ ಪುರಾತತ್ವಜ್ಞ ಸರ್ ಜಾನ್ ಮಾರ್ಷಲ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಜಿಲ್ಲೆಯು ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ನೊಳಂಬರು, ಚೋಳರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯ, ಸ್ಥಳೀಯ ಪಾಳೆಗಾರರು, ಮೈಸೂರು ಒಡೆಯರು, ಬ್ರಿಟಿಷರ ಆಳ್ವಿಕೆಗೆ ಒಳಪಟ್ಟ ಭೂಭಾಗವಾಗಿತ್ತು.

ಬ್ರಿಟಿಷರು ಟಿಪ್ಪುವಿನ ಮರಣದ ನಂತರ ಮೈಸೂರು ಸಂಸ್ಥಾನದ ಆಡಳಿತ ಮೈಸೂರು ಒಡೆಯರಿಗೆ ಪುನರ್ ಪ್ರಾಪ್ತಿಯಾಯಿತಾದರೂ ಬಹುಬೇಗ ಸಂಸ್ಥಾನವು ಬ್ರಿಟಿಷ್ ಕಮೀಷನರ್‌ಗಳ ಆಡಳಿತಕ್ಕೆ (೧೮೩೧–೧೮೮೧) ಒಳಪಟ್ಟಿತು. ಮುಮ್ಮಡಿ ಕೃಷ್ಣರಾಜ ಒಡೆಯರು ರಾಜತ್ವವನ್ನು ಪುನ: ಪಡೆಯಲು ಪ್ರಯತ್ನಿಸಿದರು. ಆದರೆ ಬ್ರಿಟಿಷ್ ಸರಕಾರವು ೧೮೬೭ ರಲ್ಲಿ ಆಡಳಿತವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ ದತ್ತುಪುತ್ರನಿಗೆ ನೀಡುವ ತಿರ್ಮಾನವನ್ನು ಕೈಗೊಂಡಿತು. ಆಗಿನ ಕಮೀಷನರ್ ಆಗಿದ್ದ ಲೂಯಿಸ್ ಬೆಂಥಾಮ್ ಬೌರಿಂಗ್‌ನು, ದತ್ತುಪುತ್ರನಾದ ೧೦ ನೇ ಚಾಮರಾಜ ಒಡೆಯರಿಗೆ ರಾಜತ್ವ ಸ್ವೀಕರಿಸಲು ೧೮೮೧ ರಲ್ಲಿ ಅನುಮತಿ ನೀಡಿದನು.

ಮೈಸೂರು ಸಂಸ್ಥಾನವು ಬ್ರಿಟಿಷರಿಗೆ ಋಣಿಯಾಗಿದ್ದು, ಅಲ್ಲಿನ ಪ್ರಜೆಗಳು ಮಹಾರಾಜರಿಗೆ ನಿಷ್ಠರಾಗಿದ್ದರು. ೧೯೧೨ ರಲ್ಲಿ ಪ್ರಜಾಮಿತ್ರ ಮಂಡಳಿಯು ಮೈಸೂರು ಸಂಸ್ಥಾನದ ಬೆಂಗಳೂರು, ಚಿತ್ರದುರ್ಗ, ಹಾಸನ, ಶಿವಮೊಗ್ಗ, ಕಡೂರು, ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಪ್ರಥಮ ರಾಜಕೀಯ ಪಕ್ಷವಾಗಿ ಉದಯವಾಯಿತು. ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯ ಚಟುವಟಿಕೆಗಳು ಹಾಗೂ ಪ್ರತಿ ವರ್ಷ ರಾಷ್ಟ್ರಮಟ್ಟದಲ್ಲಿ ನಡೆಸುತ್ತಿದ್ದ ಅಧಿವೇಶನಗಳು ಜನರಲ್ಲಿ ಜಾಗೃತಿ ಮೂಡಿಸಿದವು. ಆದರೆ ದೇಶೀಯ ಸಂಸ್ಥಾನಗಳಲ್ಲಿ ಆಗ ಅಂತಹ ತೀವ್ರ ಪರಿಸ್ಥಿತಿ ಸೃಷ್ಟಿ ಆಗಿರಲಿಲ್ಲ.



೧೯೧೮ರ ನಂತರ ಮೈಸೂರು ಸಂಸ್ಥಾನದಲ್ಲಿ ಅಸ್ತಿತ್ವಕ್ಕೆ ಬಂದ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಮದ್ಯಪಾನ ನಿಷೇಧ, ಹಿಂದಿ ಭಾಷಾ ಪ್ರಚಾರ, ಧಾರ್ಮಿಕ ಐಕ್ಯತೆ, ಅಸ್ಪೃಶ್ಯತೆ ನಿವಾರಣೆ ಮತ್ತು ಇತರ ಕಾರ್ಯಗಳ ಮೂಲಕ ರಾಷ್ಟ್ರೀಯ ಭಾವನೆ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ರಾಷ್ಟ್ರೀಯ ಸ್ವಾತಂತ್ರ್ಯದ ಪರಿಕಲ್ಪನೆ ರಾಜ್ಯದಲ್ಲಿ ಯಾವುದೇ ನಿರ್ದಿಷ್ಟ ಸ್ವರೂಪ ನೀಡಲು ಸಾಧ್ಯವಾಗಿರಲಿಲ್ಲ.

೧೯೨೭ ಏಪ್ರಿಲ್ ೨೦ ರಂದು ಖಾದಿ ಪ್ರಚಾರಕ್ಕಾಗಿ ದಕ್ಷಿಣ ಭಾರತದಲ್ಲಿ ಗಾಂಧೀಜಿಯವರು ಪ್ರವಾಸ ಕೈಗೊಂಡಾಗ ಮಾರ್ಗಮಧ್ಯದಲ್ಲಿ ಮಹಾತ್ಮ ಗಾಂಧೀಜಿಯವರು ಅನಾರೋಗ್ಯ ಪೀಡಿತರಾದರು. ಆಗ ಅವರು ಬೆಳಗಾವಿ ಬಳಿಯ ಅಂಬೋಲಿ ಗಿರಿಧಾಮಕ್ಕೆ ಹೋದರಾದರೂ ಅಲ್ಲಿನ ಹವಾಗುಣ ಹಿಡಿಸದಿದ್ದಾಗ ಅಲ್ಲಿಂದ ಚಿಕ್ಕಬಳ್ಳಾಪುರದಲ್ಲಿರುವ ನಂದಿಬೆಟ್ಟಕ್ಕೆ ಬಂದು ಅಲ್ಲಿಯ ಕನ್ನಿಂಗ್ ಹ್ಯಾಂ ಭವನದಲ್ಲಿ ತಂಗಿದ್ದರು. ಈ ಗಿರಿಧಾಮವು ೧೭೭೫ ಮೆಟ್ಟಿಲುಗಳುಳ್ಳ, ಎರಡು ಮೈಲಿ ಕಡಿದಾದ ಮಾರ್ಗವನ್ನು ಹೊಂದಿದೆ. ಇವರ ಜೊತೆಗೆ ಮಡದಿ ಕಸ್ತೂರಿಬಾ ಹಾಗೂ ಹಂಜಾ ಹುಸೇನರೊಂದಿಗೆ ಆಗಮಿಸಿದ್ದರು. ಈ ಗಿರಿಧಾಮದಲ್ಲಿ ೪೫ ದಿನಗಳ ಕಾಲ ತಂಗಿದ್ದರು. (ಏಪ್ರಿಲ್ ೨೦ ರಿಂದ ಜೂನ್ ೪ ರವರೆಗೆ) ಜೊತೆಗೆ ವ್ಯವಸ್ಥೆಯ ಉಸ್ತುವಾರಿಗಾಗಿ ಸಿ.ರಾಜಗೋಪಾಲಚಾರಿ ಆಗಮಿಸಿದ್ದರು. ಕೆಂಗೇರಿಯ ಗುರುಕುಲದ ಬ್ರಹ್ಮಚಾರಿ ರಾಮಚಂದ್ರ ಅವರು ನಂದಿ ಬೆಟ್ಟಕ್ಕೆ ಹೋಗಿ ಗಾಂಧಿ ಪರಿವಾರಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಿದ್ದರು.

೧೯೨೭ ಜೂನ್ ೫ ರಂದು ಹೊರಟು ಚಿಕ್ಕಬಳ್ಳಾಪುರ ಮಾರ್ಗವಾಗಿ ಬೆಂಗಳೂರನ್ನು ಅಂದು ರಾತ್ರಿ ತಲುಪಿದರು. ಬೆಂಗಳೂರಿಗೆ ಪ್ರಯಾಣ ಮಾಡುವಾಗ ಚಿಕ್ಕಬಳ್ಳಾಪುರದಲ್ಲಿ ಗಾಂಧೀಜಿಯವರಿಗಾಗಿ ಏರ್ಪಡಿಸಿದ್ದ ಸಭೆಯಲ್ಲಿ ತಾಲ್ಲೂಕಿನ ಜನತೆ ಹಾಗೂ ಹರಿಜನರು ಪ್ರತ್ಯೇಕ ಬಿನ್ನವತ್ತಳೆ

ಹಾಗೂ ಹರಿಜನ ನಿಧಿಯನ್ನು ನೀಡಿದರು. ಸನ್ಮಾನದ ನಂತರ ಮಾತನಾಡಿದ ಗಾಂಧೀಜಿಯವರು ಅಸ್ಪೃಶ್ಯತೆಯನ್ನು ತೊಡೆದು ಹಾಕುವಂತೆ ಕರೆ ನೀಡಿದರು. ಗಾಂಧೀಜಿಯವರ ಜೊತೆಯಲ್ಲಿ ಈ ಜಿಲ್ಲೆಯವರಾದ ಕ್ಯಾಸಂಬಳ್ಳಿ ಚೆಂಗಲರಾಯರೆಡ್ಡಿ, ಟಿ.ರಾಮಚಾರ್, ಕೆ.ಸಂಪಂಗಿರಾಮಯ್ಯ, ಎನ್.ಸಿ.ತಿಮ್ಮಾರೆಡ್ಡಿ, ಎನ್.ಸಿ.ನಾಗಯ್ಯರೆಡ್ಡಿ ಹಾಗೂ ಇತರ ನಾಯಕರು ಸಂಸ್ಥಾನದ ವಿದುರಾಶ್ವತ್ಥ, ಗೌರಿಬಿದನೂರು, ಚಿಕ್ಕಬಳ್ಳಾಪುರ, ಚಿಂತಾಮಣಿ, ಶಿಡ್ಲಘಟ್ಟ, ಕೋಲಾರ, ಬಂಗಾರಪೇಟೆ ಹಾಗೂ ಕೆ.ಜಿ.ಎಫ್‌ಗಳಿಗೆ ಭೇಟಿ ನೀಡಿ ಹರಿಜನ ನಿಧಿ ಸಂಗ್ರಹಿಸಿದ್ದರು. ಹಲವೆಡೆ ಸಂಚರಿಸಿ ಸಭೆಗಳನ್ನು ಉದ್ದೇಶಿಸಿ ಭಾಷಣಗಳನ್ನು ಮಾಡಿದ್ದರು. ಇಷ್ಟೆಲ್ಲಾ ಪ್ರಚಾರ ಆಂದೋಲನಗಳು ನಡೆದರೂ ಮೈಸೂರು ಸಂಸ್ಥಾನದ ಜನರು ರಾಷ್ಟ್ರೀಯ ಚಳುವಳಿಯ ಕಡೆಗೆ ಹೆಚ್ಚು ಆಕರ್ಷಿತರಾಗಿರಲಿಲ್ಲ.

೧೯೩೦ ರಲ್ಲಿ ಪ್ರಜಾಮಿತ್ರ ಮಂಡಳಿಯ ಕೆಲವು ಸದಸ್ಯರು ಪ್ರಜಾಪಕ್ಷ ಎಂಬ ಹೊಸ ಪಕ್ಷವನ್ನು ಸ್ಥಾಪಿಸಿದರು. ಈ ಪಕ್ಷ ಜನರ ಭಾವನೆಗಳಿಗೆ ಪೂರಕವಾಗಿ ತನ್ನ ಕಾರ್ಯಚಟುವಟಿಕೆಗಳನ್ನು ವಿಸ್ತರಿಸುತ್ತ ಬಂದಿದ್ದರಿಂದ ವ್ಯಾಪಕ ಜನ ಬೆಂಬಲವನ್ನು ಪಡೆಯಿತು. ಜನರ ಮಧ್ಯೆ ಇದ್ದ ಭಿನ್ನಾಭಿಪ್ರಾಯಗಳನ್ನು ತೊರೆದು ೧೯೩೪ ರಲ್ಲಿ ಮೈಸೂರು ಪ್ರಜಾ ಸಂಯುಕ್ತ ಪಕ್ಷ ಎಂಬ ಹೆಸರಿನಲ್ಲಿ ಒಂದು ಗೂಡಿದರು. ಈ ಪಕ್ಷ ಜವಾಬ್ದಾರಿ ಸರ್ಕಾರದ ಸ್ಥಾಪನೆ, ಆಡಳಿತದಲ್ಲಿ ಎಲ್ಲಾ ವರ್ಗಗಳಿಗೂ ಪ್ರಾತಿನಿಧ್ಯ, ರಾಷ್ಟ್ರೀಯ ಕಾಂಗ್ರೆಸ್ಸಿನ ಕಾರ್ಯಕ್ರಮಗಳ ಅನುಷ್ಠಾನ ಮುಂತಾದ ಧ್ಯೇಯೋದ್ದೇಶ ಈ ಪಕ್ಷ ಹೊಂದಿತ್ತು. ವಿ.ವೆಂಕಟಪ್ಪ, ಎನ್.ಸಿ.ನಾಗಯ್ಯರೆಡ್ಡಿ, ಎನ್.ಸಿ.ತಿಮ್ಮಾರೆಡ್ಡಿ, ಎಚ್.ಸಿ.ದಾಸಪ್ಪ, ಎಚ್.ಸಿದ್ದಯ್ಯ, ಎಚ್.ಗುಂಡಪ್ಪಗೌಡ, ಕೆ. ಚೆಂಗಲರಾಯರೆಡ್ಡಿ ಮುಂತಾದ ಮುಖಂಡರ ನಾಯಕತ್ವದಲ್ಲಿ ಪಕ್ಷವು ಸಮರ್ಥವಾಗಿ ಬೆಳೆಯಿತು.

ಮಹಾತ್ಮ ಗಾಂಧೀಜಿಯವರು ೧೯೩೨ ರ ಜನವರಿ ೪ ರಂದು ಮುಂಬೈಯಲ್ಲಿ ಬಂಧನಕ್ಕೆ ಒಳಗಾದರು. ಬಂಧನವನ್ನು ವಿರೋಧಿಸಿ ಕೋಲಾರ, ಚಿಕ್ಕಬಳ್ಳಾಪುರ, ಚಿಂತಾಮಣಿ, ರಾಬರ್ಟ್‌ಸನ್‌ಪೇಟೆ ಹಾಗೂ ಬಂಗಾರ ಪೇಟೆ ಪಟ್ಟಣಗಳಲ್ಲಿ ಪೂರ್ಣ ಹರತಾಳವನ್ನು ಆಚರಿಸಲಾಯಿತು. ವಿದೇಶಿ ವಸ್ತುಗಳ ಬಹಿಷ್ಕಾರ ಮಾಡಿ, ಸ್ವದೇಶಿ ವಸ್ತುಗಳನ್ನು ಬಳಸಲು ಕರೆ ನೀಡಲಾಯಿತು.



ಅದೇ ಕಾಲಕ್ಕೆ ಗಾಂಧೀಜಿಯವರು ೧೯೩೪ ರಲ್ಲಿ ಹರಿಜನೋದ್ಧಾರ ಕಾರ್ಯಕ್ರಮಕ್ಕಾಗಿ ನಿಧಿ ಸಂಗ್ರಹಿಸಲು ಹಿಂದೂಪೂರದಿಂದ ಹೊರಟು ಗೌರಿಬಿದನೂರು ಮಾರ್ಗವಾಗಿ ತುಮಕೂರಿಗೆ ತೆರಳಿದರು. ಆ ಸಂದರ್ಭದಲ್ಲಿ ಗಾಂಧೀಜಿಯವರಿಗೆ ವಿದುರಾಶ್ವತ್ಥದಲ್ಲಿ ಎನ್.ಸಿ. ನಾಗಯ್ಯರೆಡ್ಡಿಯವರು ಹೂಮಾಲೆ ಹಾಕಿ ಆತ್ಮೀಯ ಸ್ವಾಗತ ಕೋರಿದರು. ಅಲ್ಲಿಂದ ಹೊರಟು ಗೌರಿಬಿದನೂರು ತಲುಪಿದ ಗಾಂಧೀಜಿಯವರ ಸ್ವಾಗತಕ್ಕೆಂದು ಸ್ವಾಗತ ಸಮಿತಿಯಿಂದ ಗೌರಿಬಿದನೂರಿನಲ್ಲಿ ಅದ್ದೂರಿ ವ್ಯವಸ್ಥೆ ಮಾಡಲಾಗಿತ್ತು. ಇಲ್ಲಿಯ ಪುರಸಭೆಯವರು ಗಾಂಧೀಜಿಗೆ ಬಿನ್ನವತ್ತಳೆ ನೀಡಿ ಸನ್ಮಾನಿಸಿ ಹರಿಜನ ನಿಧಿಗಾಗಿ ೫೬೦ ರೂಗಳನ್ನು ನೀಡಿದರು ಮತ್ತು ಮೈಸೂರು ಸೇರಿದಂತೆ ಸಂಸ್ಥಾನದ ಹಲವು ಭಾಗಗಳಲ್ಲಿ ಪಾದಯಾತ್ರೆ ಕೈಗೊಂಡು ಹಲವಾರು ಸಭೆಗಳನ್ನು ಉದ್ದೇಶಿಸಿ ಮಾತನಾಡಿ ಚಳವಳಿಗಳಿಗೆ ಹುರುಪು ನೀಡಿದರು.

ಉಪ್ಪಿನ ಸತ್ಯಾಗ್ರಹ, ಕರನಿರಾಕರಣ ಚಳವಳಿಗಳು ಮೈಸೂರು ಸಂಸ್ಥಾನದಲ್ಲಿ ನೇರವಾಗಿ ನಡೆಯಲಿಲ್ಲ, ೧೯೩೭ರಲ್ಲಿ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆ, ನ್ಯಾಯ ವಿಧಾಯಕ ಸಭೆಗಳಿಗೆ ಚುನಾವಣೆಗಳು ನಡೆದಾಗ ಕಾಂಗ್ರೆಸ್ ಪ್ರಜಾಪ್ರತಿನಿಧಿ ಸಭೆಗೆ ಅಭ್ಯರ್ಥಿಗಳನ್ನು ನಿಲ್ಲಿಸುವ ಮೂಲಕ ಸಂಸ್ಥಾನದ ಕಾಂಗ್ರೆಸ್ ಕಾರ್ಯಕರ್ತರು ನೇರವಾಗಿ ರಾಜಕೀಯಕ್ಕೆ ಧುಮುಕಿದರು. ಸರ್ಕಾರದ ದಮನಕಾರಿ ಕ್ರಮಗಳ ನಡುವೆಯೂ ಕಾಂಗ್ರೆಸ್ಸಿನ ೩೦ ಮಂದಿ ಸ್ಪರ್ಧಿಗಳು ಜಯಶೀಲರಾದರು. ಸಂಸ್ಥಾನದ ರಾಜಕೀಯದಲ್ಲಿ ಕಾಂಗ್ರೆಸ್ ಪ್ರವೇಶಿಸಿದ ಮೇಲೆ ಸರ್ಕಾರ ಅದರ ನಾಯಕರ ಮೇಲೆ ದಬ್ಬಾಳಿಕೆಯನ್ನು ಪ್ರಾರಂಭಿಸಿತು. ಸರ್ಕಾರದ ದಮನಕಾರಿ ನೀತಿಯನ್ನು ಖಂಡಿಸಲು ಹಾಗೂ ಸಂಸ್ಥಾನದಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಲು ಮೈಸೂರು ಕಾಂಗ್ರೆಸ್ ಬೋರ್ಡಿನ ಪರವಾಗಿ ಕೌನ್ಸಿಲ್ ಆಫ್ ಆಕ್ಷನ್ ಎಂಬ ಸಮಿತಿಯನ್ನು ಟಿ. ಸಿದ್ದಲಿಂಗಯ್ಯನವರ ನೇತೃತ್ವದಲ್ಲಿ ನೇಮಿಸಲಾಯಿತು.

ಪ್ರಜಾ ಸಂಯುಕ್ತ ಪಕ್ಷ ಹಾಗೂ ಮೈಸೂರು ಸಂಸ್ಥಾನದ ಕಾಂಗ್ರೆಸ್ ಪ್ರಮುಖ ಪಕ್ಷಗಳು ಆಗಿದ್ದವು. ಈ ಎರಡು ಪಕ್ಷಗಳ ಆಶಯಗಳು ಮತ್ತು ಧ್ಯೇಯೋದ್ದೇಶಗಳು ಒಂದೇ ಆಗಿದ್ದವು. ಸಂಸ್ಥಾನದಲ್ಲಿ ಕಾಂಗ್ರೆಸ್ ಪಕ್ಷವನ್ನು

ಬಲಗೊಳಿಸುವ ಉದ್ದೇಶದಿಂದ ಹಾಗೂ ಸ್ವಾತಂತ್ರ್ಯ ಚಳವಳಿಯನ್ನು ತೀವ್ರಗೊಳಿಸುವ ಆಶಯದಿಂದ ಕಾಂಗ್ರೆಸ್ ಪಕ್ಷದೊಡನೆ ಪ್ರಜಾ ಸಂಯುಕ್ತ ಪಕ್ಷವನ್ನು ವಿಲೀನಗೊಳಿಸುವ ಪ್ರಯತ್ನದಲ್ಲಿ ಟಿ. ಸಿದ್ದಲಿಂಗಯ್ಯ, ಕೆ. ಚೆಂಗಲರಾಯರೆಡ್ಡಿ, ಎನ್.ಎಸ್. ಹರ್ಡೀಕರ್ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯರು ಪ್ರಮುಖ ಪಾತ್ರ ವಹಿಸಿದರು. ನಂತರ ವಿಲೀನದ ನಿರ್ಣಯವನ್ನು ಘೋಷಿಸಿದರು.

ಕೆ. ಚೆಂಗಲರಾಯರೆಡ್ಡಿ ಅವರು ಮೊಟ್ಟ ಮೊದಲಿಗೆ ಮೈಸೂರು ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾಗಿ ಆಯ್ಕೆಯಾದರು. ಈ ವಿಲೀನವು ಮೈಸೂರು ಸಂಸ್ಥಾನದಲ್ಲಿ ಮಹಾರಾಜರ ಕೃಪಾಶ್ರಯದಲ್ಲಿ ಸ್ಥಾಪನೆಯಾಗಬೇಕೆಂದು ಜವಾಬ್ದಾರಿ ಸರ್ಕಾರದ ಚಳವಳಿಗೆ ಸ್ವರೂಪವನ್ನು, ಹುರುಪನ್ನು ನೀಡಿತು. ಕಾಂಗ್ರೆಸ್ ಜನಸಾಮಾನ್ಯರ ಪಕ್ಷವಾಗಿ ಮತ್ತು ಬಲಿಷ್ಠ ರಾಜಕೀಯ ಪಕ್ಷವಾಗಿ ರಾಷ್ಟ್ರ ಮಟ್ಟದ ನಾಯಕರ ಗಮನ ಸೆಳೆಯಿತು.ಇದೇ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕರಾದ ಕೆ.ಟಿ.ಭಾಷ್ಯಂ ಮತ್ತು ಎನ್.ಸಿ.ತಿಮ್ಮಾರೆಡ್ಡಿ ಅವರನ್ನು ಬಂಧಿಸಿದ್ದರಿಂದ ಸಂಸ್ಥಾನ ಅತ್ಯಂತ ವ್ಯಾಪಕ ಪ್ರತಿಭಟನೆಯನ್ನು ಎದುರಿಸ ಬೇಕಾಯಿತು. ಪಕ್ಷದ ನೈತಿಕ ಸ್ಥೈರ್ಯವನ್ನು ಕುಗ್ಗಿಸಲು ಸರ್ಕಾರವು ಹಲವಾರು ದಮನಕಾರಿ ಕ್ರಮಗಳನ್ನು ಕೈಗೊಂಡಿತು. ಸರ್ಕಾರದ ದಮನಕಾರಿ ಕ್ರಮಗಳು ತೀವ್ರಗೊಂಡಷ್ಟು ಕಾಂಗ್ರೆಸ್ ನಾಯಕರಲ್ಲಿ ನೈತಿಕ ಸ್ಥೈರ್ಯ ಹೆಚ್ಚುತ್ತಾ ಹೋಯಿತು.

೧೯೩೭ರಲ್ಲಿ ಸಂಸ್ಥಾನದಲ್ಲಿ ಕ್ಷಾಮ ಸಂಭವಿಸಿತು, ರೈತರು ತೆರಿಗೆ ಕಟ್ಟಲಾರದೆ ತತ್ತರಿಸಿ ಹೋದರು. ಆದರೆ ಮೈಸೂರು ಸರ್ಕಾರ ಈ ವಾಸ್ತವಾಂಶವನ್ನು ತಿಳಿದುಕೊಳ್ಳದೆ ಜಯಚಾಮರಾಜೇಂದ್ರ ಒಡೆಯರ ಮದುವೆ ನಿಮಿತ್ತ ಲಕ್ಷಾಂತರ ರೂಪಾಯಿಗಳನ್ನು ವ್ಯಯ ಮಾಡುತ್ತಿದ್ದರು. ಕಾಂಗ್ರೆಸ್ ನಾಯಕರು ಮತ್ತು ಜನರು ಮೈಸೂರು ಸರ್ಕಾರದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ನಾಯಕರು ಹಳ್ಳಿ ಹಳ್ಳಿಗೆ ಹೋಗಿ ಕಾಂಗ್ರೆಸ್ಸಿನ ಸಂದೇಶಗಳನ್ನು ಜನರಿಗೆ ತಿಳಿಸಿ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಅವಶ್ಯಕತೆಯನ್ನು ಜನರಿಗೆ ಮನದಟ್ಟು ಮಾಡಿಕೊಟ್ಟರು, ಅಲ್ಲದೆ ಅವರಲ್ಲಿ ರಾಷ್ಟ್ರಪ್ರೇಮದ ಕಿಚ್ಚನ್ನು



ಹಚ್ಚುವಲ್ಲಿ ಸಫಲರಾದರು. ಮೈಸೂರಿನಲ್ಲಿ ಕೆ.ಟಿ.ಭಾಷ್ಯಂ ಅವರನ್ನು ೧೯೩೭ ನೇ ಅಕ್ಟೋಬರ್ ೧೫ ನೇ ತಾರೀಕು ಮಧ್ಯರಾತ್ರಿ ರಾಜದ್ರೋಹದ ಭಾಷಣ ಮಾಡಿದರೆಂದು ದಸ್ತಗಿರಿ ಮಾಡಲಾಯಿತು. ಕೆ.ಟಿ.ಭಾಷ್ಯಂ ದಸ್ತಗಿರಿಯಾದ ಕೆಲವು ದಿನಗಳಲ್ಲಿ ರಾಜದ್ರೋಹದ ಭಾಷಣ ಮಾಡಿದರೆಂಬ ಕಾರಣಕ್ಕಾಗಿ ಎನ್.ಸಿ.ತಿಮ್ಮಾರೆಡ್ಡಿ ಅವರನ್ನು ಬಂಧಿಸಿ ಇವರಿಬ್ಬರಿಗೂ ಹತ್ತು ತಿಂಗಳ ಕಠಿಣ ಸಜೆ ಹಾಗೂ ನೂರು ರೂಪಾಯಿ ಜುಲ್ಮಾನೆ ವಿಧಿಸಿದರು, ಇವರ ಬಂಧನವನ್ನು ಪ್ರತಿಭಟಿಸಿ ದೇಶಭಕ್ತರ ದಿನಾಚರಣೆಯನ್ನು ಆಚರಿಸಿ ಸಂಸ್ಥಾನದಾದ್ಯಂತ ಹರತಾಳಗಳು ಮತ್ತು ಸಭೆಗಳು ನಡೆದವು.

## ೧೯೩೮ರ ಹರಿಪುರ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ

ಗುಜರಾತ್‌ನ ಹರಿಪುರದಲ್ಲಿ ಸುಭಾಷ್‌ಚಂದ್ರ ಬೋಸ್‌ರವರ ಅಧ್ಯಕ್ಷತೆಯಲ್ಲಿ ೫೧ನೇ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ೧೯೩೮ರ ಫೆಬ್ರವರಿಯಲ್ಲಿ ಜರುಗಿತು. ಈ ಅಧಿವೇಶನದಲ್ಲಿ ಜವಾಹರಲಾಲ್ ನೆಹರು, ಬಾಬು ರಾಜೇಂದ್ರ ಪ್ರಸಾದ್ ಮೊದಲಾದ ರಾಷ್ಟ್ರ ನಾಯಕರು ಹಾಗೂ ಮೈಸೂರು ಪ್ರಾಂತ್ಯದ ಕಾಂಗ್ರೆಸ್ ಮುಖಂಡರಾದ ಡಾ. ಪಾರ್ಥನಾರಾಯಣ ಪಂಡಿತ, ಕೆ.ಸಿ.ರೆಡ್ಡಿ, ಟಿ.ಸಿದ್ದಲಿಂಗಯ್ಯ, ಕೆ.ಹನುಮಂತಯ್ಯ ಮೊದಲಾದವರು ಭಾಗವಹಿಸಿದ್ದರು. ಈ ಅಧಿವೇಶನದಲ್ಲಿ ದೇಶೀಯ ಸಂಸ್ಥಾನಗಳ ಚುನಾವಣೆಗಳಲ್ಲಿ ಭಾಗವಹಿಸುವಂತೆ ಹಾಗೂ ಕಾನೂನು ಭಂಗ ಚಳವಳಿ, ಸತ್ಯಾಗ್ರಹ ಮುಂತಾದ ಚಳವಳಿಗಳನ್ನು ನಡೆಸಲು ಅನುಕೂಲವಾಗುವಂತೆ ಸಂಸ್ಥಾನಗಳಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಶಾಖೆಗಳನ್ನು ಸ್ಥಾಪಿಸಿಕೊಳ್ಳಬೇಕು ಎಂಬ ಮಹತ್ವದ ನಿರ್ಣಯವನ್ನು ಹರಿಪುರ ಕಾಂಗ್ರೆಸ್‌ನಲ್ಲಿ ತೆಗೆದು ಕೊಳ್ಳಲಾಯಿತು.

೧೯೩೮ ಫೆಬ್ರವರಿ ೧೨ ನೇ ತಾರೀಕು ಸರ್ಕಾರ ಎಲ್ಲಾ ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡಿತು. ಕಾಂಗ್ರೆಸ್ ಮುಖಂಡರ ಮೇಲೆ ಹೂಡಲಾಗಿದ್ದ ಎಲ್ಲಾ ಮೊಕದ್ದಮೆಗಳನ್ನು ವಾಪಸ್ಸು ತೆಗೆದು ಕೊಳ್ಳಲಾಯಿತು. ಬಂಧನದಿಂದ ಬಿಡುಗಡೆಯಾದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ೧೯೩೮ ನೇ ಫೆಬ್ರವರಿ ೨೮ ನೇ ತಾರೀಖು ಮಹಾಶಿವರಾತ್ರಿಯ ದಿನ ಮೈಸೂರಿನಲ್ಲಿ ಸಭೆ ಸೇರಿ ಸ್ವತಂತ್ರವಾದ ಮೈಸೂರು ಕಾಂಗ್ರೆಸ್ ಸಂಸ್ಥೆಯನ್ನು

ಸ್ಥಾಪಿಸಲು ನಿರ್ಣಯ ಮಾಡಿದರು. ಇದಕ್ಕೆ ಟಿ.ಸಿದ್ದಲಿಂಗಯ್ಯನವರು ಪ್ರಥಮ ಅಧ್ಯಕ್ಷರಾಗಿ, ಕೆ.ಸಿ.ರೆಡ್ಡಿ ಅವರು ಕಾರ್ಯದರ್ಶಿಯಾಗಿ ಆಯ್ಕೆಯಾದರು. ಮೈಸೂರು ಕಾಂಗ್ರೆಸ್‌ಗೆ ಮಾನ್ಯತೆ ನೀಡಿ ಸುಧಾರಣಾ ಸಮಿತಿಯಲ್ಲಿ ಸ್ಥಾನ ಕಲ್ಪಿಸುವುದು, ಕಾಂಗ್ರೆಸ್ ರಾಷ್ಟ್ರಧ್ವಜ ಹಾರಿಸಲು ಅನುಮತಿ ನೀಡುವುದು ಹಾಗೂ ಜವಾಬ್ದಾರಿ ಸರ್ಕಾರದ ಸ್ಥಾಪನೆ, ಈ ಸುಧಾರಣೆಗಳು ಅಂತಿಮ ಗುರಿಯಾಗಬೇಕು ಎಂಬ ಬೇಡಿಕೆಗಳನ್ನು ಸರ್ಕಾರದ ಮುಂದಿಡಲಾಯಿತು. ಆದರೆ ದಿವಾನರು ಅದನ್ನು ತಿರಸ್ಕರಿಸಿದಾಗ ಕಾಂಗ್ರೆಸ್ ಸಂಸ್ಥೆಗೆ ಹೋರಾಟ ಅನಿವಾರ್ಯವಾಗಿ ಕಾಂಗ್ರೆಸ್ ಅಧಿವೇಶನ ೧೯೩೮ ರ ಏಪ್ರಿಲ್ ೭ ಮತ್ತು ೮ ನೇ ತಾರೀಕುಗಳಲ್ಲಿ ಶಿವಪುರದಲ್ಲಿ ಧ್ವಜ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದರು. ಆದರೆ, ಮೈಸೂರು ಕಾಂಗ್ರೆಸ್ ಪಕ್ಷದ ಪ್ರಥಮ ಅಧಿವೇಶನವನ್ನು ೧೯೩೮ ಏಪ್ರಿಲ್ ೧೧,೧೨,೧೩ ರಂದು ನಡೆಯಿತು.

## ಶಿವಪುರದಲ್ಲಿ ಧ್ವಜಸತ್ಯಾಗ್ರಹ

೧೯೩೮ ಏಪ್ರಿಲ್ ೧೧, ೧೨, ೧೩ ರಂದು ಬ್ರಿಟಿಷರ ವಿರುದ್ಧ ಪ್ರತಿಭಟಿಸಲು ಕರ್ನಾಟಕದ ದೇಶಾಭಿಮಾನಿಗಳು ಮಂಡ್ಯ ಜಿಲ್ಲೆಯ ಶಿವಪುರದಲ್ಲಿ ಧ್ವಜಸತ್ಯಾಗ್ರಹವನ್ನು ಹಮ್ಮಿಕೊಂಡಿದ್ದರು. ಶಿವಪುರ ಧ್ವಜ ಸತ್ಯಾಗ್ರಹ ನಾಡಿನ ಹಲವೆಡೆಗಳಲ್ಲಿ ಹೋರಾಟದ ಕಹಳೆ ಮೊಳಗಿಸಿತು.

ಶಿವಪುರ ಧ್ವಜ ಸತ್ಯಾಗ್ರಹದ ಯಶಸ್ಸಿನಿಂದ ಉತ್ತೇಜಿತರಾದ ಕಾಂಗ್ರೆಸ್ಸಿಗರು, ಸಂಸ್ಥಾನದ ಇತರೆಡೆಗಳಲ್ಲೂ ಇದೇ ರೀತಿಯ ಧ್ವಜ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲು ನಿರ್ಧರಿಸಿದರು. ಈ ಸತ್ಯಾಗ್ರಹದಿಂದ ಪ್ರಭಾವಿತರಾದ ಚಿಕ್ಕಬಳ್ಳಾಪುರದ ಸ್ವಾತಂತ್ರ್ಯ ಹೋರಾಟಗಾರರು ವಿದುರಾಶ್ವತ್ಥವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಧ್ವಜಸತ್ಯಾಗ್ರಹವನ್ನು, ಬಹಿರಂಗ ಸಭೆಯನ್ನು ನಡೆಸುವುದು ಸೂಕ್ತ ಎಂದು ಗೌರಿಬಿದನೂರಿನ ಕಾಂಗ್ರೆಸ್ ಮುಖಂಡರಾದ ಎನ್.ಸಿ.ತಿಮ್ಮಾರೆಡ್ಡಿ ಎನ್.ಸಿ. ನಾಗಯ್ಯರೆಡ್ಡಿ, ಎಸ್.ಸಿ.ಶ್ರೀನಿವಾಸರಾವ್, ಗೆದರೆ ಗ್ರಾಮದ ರಾಮಸ್ವಾಮಿ, ಜಿ.ವೆಂಕಟಸ್ವಾಮಿಗೌಡ ಮುಂತಾದ ಮುಖಂಡರುಗಳು ತೀರ್ಮಾನಿಸಿದರು. ಈ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಮುಖ್ಯವಾಗಿ ಎರಡು ಕಾರಣಗಳಿದ್ದವು.



ಮೊದಲನೆಯದಾಗಿ ವಿದುರಾಶ್ವತ್ಥದಲ್ಲಿ ದಿನಾಂಕ ೧೯೩೮ ಏಪ್ರಿಲ್ ೧೪ ರಿಂದ ೨೯ ರವರೆಗೆ ೧೫ ದಿನಗಳ ಕಾಲ ರಥೋತ್ಸವ ಹಾಗೂ ದನಗಳ ಜಾತ್ರೆ ನಡೆಯುತ್ತಿದ್ದುದರಿಂದ ಜಾತ್ರೆಗೆ ಅಪಾರ ಜನಸಮೂಹ ಹರಿದು ಬರುತ್ತದೆ, ಅಂತಹ ಸಂದರ್ಭದಲ್ಲಿ ಈ ಕಾರ್ಯಕ್ರಮ ನಡೆದರೆ ಕಾಂಗ್ರೆಸ್ಸಿನ ಧ್ಯೇಯೋದ್ದೇಶಗಳನ್ನು ಮತ್ತು ಸಂದೇಶಗಳನ್ನು ಜನರಿಗೆ ತಿಳಿಸಿ ಚಳವಳಿಗೆ ಮತ್ತಷ್ಟು ವ್ಯಾಪಕ ಬೆಂಬಲ ದೊರಕಿಸಿ ಕೊಳ್ಳುವುದು ಸಾಧ್ಯವಾಗುತ್ತದೆ. ಎರಡನೆಯದು ಪಿನಾಕಿನಿ ನದಿ ದಡದ ಮೇಲಿರುವ ವಿದುರಾಶ್ವತ್ಥ ಗ್ರಾಮವು ಮೈಸೂರು ಸಂಸ್ಥಾನದ ಗಡಿ ಪ್ರದೇಶವಾಗಿದ್ದು ಬ್ರಿಟಿಷ್ ಭಾರತ ಪ್ರದೇಶವಾದ ಚೌಳೂರು ಮುಂತಾದ ಗ್ರಾಮಗಳು (ಈಗ ಆಂಧ್ರಪ್ರದೇಶದ ಹಿಂದೂಪುರ ತಾಲ್ಲೂಕು ಅನಂತಪುರ ಜಿಲ್ಲೆಗೆ ಸೇರಿವೆ) ಕೆಲವೇ ಕಿ.ಮೀ ಅಂತರದಲ್ಲಿ ಇವೆ. ಇಲ್ಲಿ ನಡೆಯುವ ಧ್ವಜ ಸತ್ಯಾಗ್ರಹದ ಸಂದೇಶವನ್ನು ಗಡಿ ಭಾಗದಲ್ಲಿರುವ ಎಲ್ಲಾ ಗ್ರಾಮಗಳಿಗೂ ತಲುಪಿಸಿ, ಆ ಭಾಗದ ಜನತೆಯ ಪ್ರಭಾವವನ್ನು ಬಳಸಿ ಮತ್ತಷ್ಟು ಗಟ್ಟಿಗೊಳಿಸುವುದು ಆಗಿತ್ತು. ಹಿಂದೂಪುರದ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಕಲ್ಲೂರು ಸುಬ್ಬರಾವ್ ಅವರು ಪ್ರಭಾವಿ ಮುಖಂಡರಾಗಿದ್ದು ಈ ಭಾಗದ ಚಳವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

೧೯೩೮ ಏಪ್ರಿಲ್ ೧೮ ರಿಂದ ೨೫ ರವರೆಗೆ ವಿದುರಾಶ್ವತ್ಥದಲ್ಲಿ ಧ್ವಜ ಸತ್ಯಾಗ್ರಹವನ್ನು ಮಾಡ ಬೇಕೆಂದು ಕಾಂಗ್ರೆಸ್ ಮುಖಂಡರು ಜನರ ಮುಂದಿಟ್ಟಾಗ ನಾಯಕರ ಕರೆಗೆ ಓಗೊಟ್ಟ ಜನರು ವಿದುರಾಶ್ವತ್ಥದಲ್ಲಿ ಒಂದು ಗೂಡಲು ಸಮ್ಮತಿಸಿದರು. ಇದರ ಜೊತೆಗೆ ಜಾತ್ರೆಗೆಂದು ಬರುವ ಯಾತ್ರಾರ್ಥಿಗಳು ಚಳವಳಿಯಲ್ಲಿ ಭಾಗವಹಿಸಲು ಸಿದ್ಧರಾದರು.

ಇದರ ಸುಳಿವು ಅರಿತ ಕೋಲಾರ ಜಿಲ್ಲೆಯ ನ್ಯಾಯಾಧೀಶರಾದ ಶ್ರೀ ಜಿ.ಅಪ್ಪಾಜಿಗೌಡರು ಜಿಲ್ಲೆಯಾದ್ಯಂತ ೧೪೪ ಸೆಕ್ಷನ್ ಪ್ರಕಾರ ಧ್ವಜಸತ್ಯಾಗ್ರಹದ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿದರು. ಇದನ್ನು ಲೆಕ್ಕಿಸದ ಸತ್ಯಾಗ್ರಹಿಗಳು ತಾಲ್ಲೂಕಿನ ಮುಖಂಡರಾದ ಎನ್.ಸಿ.ನಾಗಯ್ಯರೆಡ್ಡಿ, ಎನ್.ಸಿ.ತಿಮ್ಮಾರೆಡ್ಡಿ, ಎಸ್.ಸಿ.ಶ್ರೀನಿವಾಸರಾವ್, ನರಸಿಂಹಪ್ಪ, ನಾರಾಯಣಪ್ಪ, ಸಂಗಪ್ಪ, ವೆಂಕಟರಾವ್, ಗೆದರೆ ರಾಮಸ್ವಾಮಿ, ಶ್ರೀಪಾಲಯ್ಯ, ಜಿ.ವೆಂಕಟಸ್ವಾಮಿಗೌಡ ಮುಂತಾದವರು

ಜಿಲ್ಲೆಯಾದ್ಯಂತ ಪ್ರವಾಸ ಮಾಡಿ ಜನರಲ್ಲಿ ಸ್ವಾತಂತ್ರ್ಯ ಪ್ರೇಮವನ್ನು ತುಂಬಿ ಸ್ವಾತಂತ್ರ್ಯ ಚಳವಳಿ ಕಹಳೆಯನ್ನು ಮೊಳಗಿಸಿದರು.

ಚಳವಳಿಯ ಬಿಸಿಯನ್ನು ಗಮನಿಸಿದ ಜಿಲ್ಲಾ ನ್ಯಾಯಾಧೀಶರಾದ ಮಾನ್ಯ ಶ್ರೀ ಜಿ.ಅಪ್ಪಾಜಿಗೌಡರು ೧೯೩೮ ಏಪ್ರಿಲ್ ೧೫ ರಂದು ೩೭ ಜನ ಮೀಸಲು ಪಡೆಯ ಪೋಲಿಸರೊಂದಿಗೆ ಪೋಲಿಸ್ ಇನ್ಸ್‌ಪೆಕ್ಟರ್ ಶ್ರೀ ಬಸಪ್ಪ, ಪೋಲಿಸ್ ಸೂಪರಿಡೆಂಟ್ ಎಸ್.ಪಿ. ಚಾಪಲ್ (ಎಸ್.ಪಿ), ಸಬ್‌ಡಿವಿಜನಲ್ ಆಫೀಸರ್ ಎಂ.ಶಾಮಯ್ಯ, ಎಲ್.ಜಿ ರಾಜಶೇಖರ್ ಒಡೆಯರು ಸೇರಿದಂತೆ ಹಲವರೊಂದಿಗೆ ಸತ್ಯಾಗ್ರಹದ ಸ್ಥಳಕ್ಕೆ ಹಾಜರಾದರು.

೧೯೩೮ರ ಏಪ್ರಿಲ್ ೧೮ ರಂದು ಕಾಂಗ್ರೆಸ್ ಮುಖಂಡರು ದೇಶಭಕ್ತರ ದಿನಾಚರಣೆಯನ್ನು ಆಚರಿಸಲು ತೀರ್ಮಾನಿಸಲಾಯಿತು. ಈ ಕಾರ್ಯಕ್ರಮಕ್ಕೆ ಕಲ್ಲೂರು ಸುಬ್ಬರಾವ್‌ರನ್ನು ಭಾಷಣಕಾರರನ್ನಾಗಿ ಆಹ್ವಾನಿಸಲಾಯಿತು. ಗೌರಿಬಿದನೂರು ಕಾಂಗ್ರೆಸ್ ಅಧ್ಯಕ್ಷರಾದ ವೆಂಕಟಸ್ವಾಮಿಗೌಡರು ಆಗಮಿಸಿದ್ದರು. ಧ್ವಜಸತ್ಯಾಗ್ರಹದ ಅಧ್ಯಕ್ಷರಾದ ಎನ್.ಸಿ.ನಾಗಯ್ಯರೆಡ್ಡಿ ಅವರು ಇತರ ಮುಖಂಡರೊಡನೆ ಬಂದು ಕಾರ್ಯಕ್ರಮ ಪ್ರಾರಂಭಿಸುವಷ್ಟರಲ್ಲಿ ಗೌರಿಬಿದನೂರಿನ ಅಮಲ್ದಾರ್, ಮ್ಯಾಜಿಸ್ಟ್ರೇಟರು ೧೪೪ನೇ ಸೆಕ್ಷನ್ ಜಾರಿ ಮಾಡಿ ವಿದುರಾಶ್ವತ್ಥ ಗ್ರಾಮದ ಎರಡು ಮೈಲುಗಳ ಸುತ್ತಮುತ್ತ ೧೫ ದಿನಗಳ ಕಾಲ ಸಭೆಗಳನ್ನು ನಡೆಸುವುದನ್ನು, ಭಾಷಣ ಮಾಡುವುದನ್ನು ಹಾಗೂ ಧ್ವಜಾರೋಹಣ ಮಾಡುವುದನ್ನು ನಿಷೇಧಿಸಿ ಆಜ್ಞೆ ಹೊರಡಿಸಿದರು.

೧೯೩೮ ಏಪ್ರಿಲ್ ೧೮ ರಿಂದ ೨೧ ನೇ ತಾರೀಕಿನವರೆಗೆ ಯಾವುದೇ ಅಹಿತಕರ ಘಟನೆಗಳು ನಡೆಯಲಿಲ್ಲ, ವಾತಾವರಣವು ಶಾಂತವಾಗಿಯೇ ಇತ್ತು. ಸ್ವಲ್ಪ ನಿರಾಳ ವಾತಾವರಣ ಸೃಷ್ಟಿಯಾಯಿತು.

ಮಾರನೇ ದಿನ ಅಂದರೆ ದಿನಾಂಕ ೨೨ ನೇ ತಾರೀಕು ಬೆಳಗಾಯಿತು. ಎನ್.ಸಿ.ನಾಗಯ್ಯರೆಡ್ಡಿ ಅವರ ಮುಂದಾಳತ್ವದಲ್ಲಿ ಸತ್ಯಾಗ್ರಹಿಗಳು ಗೌರಿಬಿದನೂರಿನಿಂದ ವಿದುರಾಶ್ವತ್ಥಕ್ಕೆ ಆಗಮಿಸಿ ವಿದುರಾಶ್ವತ್ಥದ ದೇವಾಲಯದ ಹಿಂದಿನ ಮರಗಳ ತೋಪಿನಲ್ಲಿ ಸಾರ್ವಜನಿಕ ಸಭೆಯನ್ನು ನಡೆಸಿತು.



ಹೆಚ್.ಸಿ.ದಾಸಪ್ಪ ತ್ರಿವರ್ಣ ಧ್ವಜವನ್ನು ಹಾರಿಸಿದರು. ಎನ್.ಸಿ. ನಾಗಯ್ಯರೆಡ್ಡಿ, ಕಲ್ಲೂರುಸುಬ್ಬರಾವ್ ಮುಂತಾದವರು ಸಭೆಯಲ್ಲಿ ಭಾಷಣವನ್ನು ಮಾಡಿದರು. ಸಿ,ಎಸ್.ಸೂರ್ಯನಾರಾಯಣರಾವ್, ಶ್ರೀಪಾಲಯ್ಯ, ಗೆದರೆ ರಾಮಸ್ವಾಮಿ, ನರಸಿಂಹಪ್ಪ, ನಾರಾಯಣಪ್ಪ, ಮುದುಗೆರೆ ಸಂಗಪ್ಪ, ಎಚ್.ಎಲ್.ವೆಂಕಟರಾವ್ ಮುಂತಾದವರು ಸಿ.ಆರ್.ಪಿ.ಸಿ ೧೪೪ ನೇ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಕರಪತ್ರಗಳನ್ನು ಹಂಚಿದರು. ಧ್ವಜ ಹಿಡಿದು ಮೆರವಣಿಗೆ ಬಂದು ಧ್ವಜಾರೋಹಣ ಮಾಡಿದರು. ಅವರ ವಿರುದ್ಧ ಐ.ಪಿ.ಸಿ ೧೮೮ನೇ ಪ್ರಕರಣದಡಿ ಆರೋಪ ಪಟ್ಟಿ ಸಲ್ಲಿಸಿ ದಸ್ತಗಿರಿ ಮಾಡಲಾಯಿತು. ಅವರೆಲ್ಲರನ್ನೂ ಚಿಕ್ಕಬಳ್ಳಾಪುರ ಮ್ಯಾಜಿಸ್ಟ್ರೇಟ್‌ರವರ ಮುಂದೆ ಹಾಜರುಪಡಿಸಲಾಯಿತು. ಮ್ಯಾಜಿಸ್ಟ್ರೇಟ್‌ರವರು ಕ್ಷಮೆಯಾಚಿಸುವಂತೆ ಆದೇಶಿಸಿದಾಗ ಅದನ್ನು ಇವರೆಲ್ಲರೂ ನಿರಾಕರಿಸಿ, ಜಾಮೀನಿನ ಮೇಲೆ ಬಿಡುಗಡೆಯಾಗಿ ಹೊರ ಬರಲು ನಿರಾಕರಿಸಿದರು.

೨೩ನೇ ದಿನಾಂಕದಂದು ಗೌರಿಬಿದನೂರಿನಿಂದ ಶ್ರೀ ರಾಮಯ್ಯಶೆಟ್ಟಿ ಅವರ ನೇತೃತ್ವದಲ್ಲಿ ಒಂದು ಗುಂಪು ಹಾಗೂ ರಮಾಪುರದಿಂದ ಶ್ರೀ ಜ್ವಾಲನಯ್ಯ ನಾಯಕತ್ವದಲ್ಲಿ ಒಂದು ಗುಂಪು ಸಾವಿರಾರು ಜನರಿದ್ದ ಎರಡು ಗುಂಪುಗಳು ವಿದುರಾಶ್ವತ್ಥಕ್ಕೆ ಬಂದು ಧ್ವಜಾರೋಹಣ ನಡೆಸಿ, ವೇದಿಕೆ ಭಾಷಣ ಮಾಡಲಾರಂಭಿಸಿದರು. ಆಗ ಮ್ಯಾಜಿಸ್ಟ್ರೇಟರ್‌ರವರು ಸಭೆ ಸೇರದಂತೆ ಆಜ್ಞಾಪಿಸಿದರು. ಸುಮಾರು ೩೦೦ ಜನರು ಅಜ್ಞೆ ಉಲ್ಲಂಘನೆಗೆ ಸಿದ್ಧರಾಗಿ ಬಂದಿದ್ದರು. ಈ ಸಂದರ್ಭದಲ್ಲಿ ರಾಷ್ಟ್ರಧ್ವಜದ ಗೌರವ ಕಾಪಾಡಲು ಸರಕಾರ ನಿಷೇಧಾಜ್ಞೆಯನ್ನು ಹಿಂದಕ್ಕೆ ಪಡೆಯುವವರೆಗೂ ಜನರೆಲ್ಲರೂ ಸತ್ಯಾಗ್ರಹ ನಡೆಸ ಬೇಕೆಂದು ಕಾಂಗ್ರೆಸ್ ಕರೆ ನೀಡಿತು. ಯಾರು ನಿಷೇಧಾಜ್ಞೆಯನ್ನು ಉಲ್ಲಂಘಿಸಲಿಲ್ಲ ಆದರೂ ಧ್ವಜಸತ್ಯಾಗ್ರಹಕ್ಕೆ ಉತ್ಸುಕರಾಗಿ ಬಂದಿದ್ದ ಸ್ವಯಂಸೇವಕರು ಶಾಂತರಾಗಿ ನಡೆದು ಕೊಳ್ಳುವಂತೆ ಮುಖಂಡರು ಅವರಿಂದ ಪ್ರತಿಜ್ಞೆ ಮಾಡಿಸಿದರು.

ಶ್ರೀ ಜ್ವಾಲನಯ್ಯನವರು ಭಾಷಣ ಮಾಡಲು ಮುಂದಾದಾಗ ಅವರನ್ನು ಬಂಧಿಸಲಾಯಿತು, ನಂತರ ಶ್ರೀ ರಾಮಯ್ಯಶೆಟ್ಟಿ ಅವರು ಭಾಷಣ ಮಾಡಿದರು, ಅವರನ್ನು ದಸ್ತಗಿರಿ ಮಾಡಲಾಯಿತು, ಆದರೆ ಜನ ಚದುರದೇ ನಾಯಕರನ್ನು

ಕೂರಿಸಿದ್ದ ವಾಹನದ ಮೇಲೆ ಬಾನೆಟ್ ಮೇಲೆ ಹತ್ತಿ ಕುಳಿತರು, ಚದುರದಿದ್ದರೆ ದಸ್ತಗಿರಿ ಮಾಡುವುದಾಗಿ ಹೇಳಿದಾಗ ಜನ ನಮ್ಮನ್ನು ದಸ್ತಗಿರಿ ಮಾಡಿ, ನಮ್ಮನ್ನು ದಸ್ತಗಿರಿ ಮಾಡಿ ಎಂದು ಕೂಗ ತೊಡಗಿದರು, ಪೊಲೀಸರು ಅವರನ್ನು ನಿಭಾಯಿಸಿ ಗೌರಿಬಿದನೂರು ಮಾರ್ಗವಾಗಿ ಚಿಕ್ಕಬಳ್ಳಾಪುರಕ್ಕೆ ಕರೆತಂದರು, ಈ ವಾರ್ತೆ ತಿಳಿದ ಜನ ದಾರಿಯುದ್ದಕ್ಕೂ ಗುಂಪು ಗುಂಪಾಗಿ ಸೇರಿ ಸರ್ಕಾರದ ವಿರುದ್ಧ ಘೋಷಣೆ ಕೂಗಲಾರಂಭಿಸಿದರು. ಈ ಸುದ್ದಿ ಹಬ್ಬುತ್ತಿದ್ದಂತೆ ಅಸಂಖ್ಯಾತ ಕಾಂಗ್ರೆಸ್ ಕಾರ್ಯಕರ್ತರು ವಿದುರಾಶ್ವತ್ಥದ ಕಡೆಗೆ ಬರಲಾರಂಭಿಸಿದರು. ಆಂಧ್ರ ಪ್ರಾಂತೀಯ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಕಲ್ಲೂರು ಸುಬ್ಬರಾವ್‌ರವರ ನೇತೃತ್ವದಲ್ಲಿ ಹಿಂದುಪುರದಿಂದ ಧ್ವಜ ಸತ್ಯಾಗ್ರಹಕ್ಕಾಗಿ ಸುಮಾರು ಐದು ನೂರು ಕಾರ್ಯಕರ್ತರು ವಿದುರಾಶ್ವತ್ಥ ತಲುಪಿದರು. ಆದರೆ ಧ್ವಜಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದಂತೆ ಪೊಲೀಸರು ಅವರನ್ನು ತಡೆದರು.

ಗೌರಿಬಿದನೂರು ಪೊಲೀಸರು ಅದೇ ದಿನ ಕೋಲಾರ ಜಿಲ್ಲಾ ಪೋಲಿಸ್ ಅಧೀಕ್ಷಕರಿಗೆ ತಂತಿ ಕಳುಹಿಸಿ ಕಾಂಗ್ರೆಸ್ ನಾಯಕರನ್ನು ಬಂಧಿಸಿದ್ದರಿಂದ ಪರಿಸ್ಥಿತಿ ಉದ್ರಿಕ್ತವಾಗಿದ್ದು ಮೀಸಲು ಪೋಲಿಸ್ ತಂಡವನ್ನು ಕಳಿಸುವಂತೆ ಕೋರಿದರು.

ಗೌರಿಬಿದನೂರಿನ ಅಮಲ್ದಾರರು, ಕಾಂಗ್ರೆಸ್ ನಾಯಕರೆಲ್ಲರೂ ಜೈಲು ಸೇರಿದರು. ಇನ್ನು ಕಾಂಗ್ರೆಸ್ ಸಮಿತಿಗೆ ಕೊನೆಗಾಲ ಬಂದಿದೆ, ಎಂದು ಕುಚೋದ್ಯದ ಮಾತುಗಳನ್ನಾಡಿದರು ಎಂದು ಎಲ್ಲಾ ಕಡೆ ಹರಡಿ ಜನರು ಕೋಪೋದ್ರಿಕ್ತರಾದರು. ಈ ಬಗ್ಗೆ ದಿನಾಂಕ ೨೩ ರಂದು ಕಾಂಗ್ರೆಸ್ ನಾಯಕರೆಲ್ಲರೂ ಒಂದು ಕರಪತ್ರ ಹೊರಡಿಸಿ ನಾವು ನಿಷೇಧಾಜ್ಞೆಯನ್ನು ಉಲ್ಲಂಘಿಸಿ ವಾಕ್ ಸ್ವಾತಂತ್ರ್ಯವನ್ನು ಸ್ಥಾಪಿಸುವುದು, ಪ್ರಾಣಕ್ಕಿಂತ ಅಧಿಕವಾದ ರಾಷ್ಟ್ರಧ್ವಜವನ್ನು ರಕ್ಷಿಸಿಕೊಳ್ಳುವುದು ನಮ್ಮ ಪವಿತ್ರ ಕರ್ತವ್ಯವಾಗಿದೆ ಎಂದು ಘೋಷಿಸಿ ಹೆಚ್ಚು ಹೆಚ್ಚು ಜನರು ಈ ಧ್ವಜ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಬೇಕೆಂದು ಕರೆ ನೀಡಿದರು.

ಏಪ್ರಿಲ್ ೨೩ ರಂದು ಗೌರಿಬಿದನೂರಿಗೆ ಬಂದ ಡಿಎಸ್ಪಿ ಎಸ್.ಪಿ.ಚಾಪಲ್ ಇನ್ನೂ ಹೆಚ್ಚು ಪೊಲೀಸರನ್ನು ಕಳಿಸುವಂತೆ ಜಿಲ್ಲಾಧಿಕಾರಿ ಮತ್ತು ಪದನಿಮಿತ್ತ ಪ್ರಥಮ ದರ್ಜೆ ದಂಡಾಧಿಕಾರಿ ಆಗಿರುವ ಶ್ರೀ ಜಿ.ಅಪ್ಪಾಜಿಗೌಡರನ್ನು ವಿನಂತಿಸಿಕೊಂಡರು.



ಏಪ್ರಿಲ್ ೨೪ ನೇ ತಾರೀಕು ಗೌರಿಬಿದನೂರಿನಲ್ಲಿ ಸಂತೆ ಇದ್ದುದ್ದರಿಂದ ಆ ದಿನ ಧ್ವಜ ಸತ್ಯಾಗ್ರಹಕ್ಕೆ ವಿರಾಮ ಘೋಷಿಸಲಾಗಿತ್ತು. ಅದೇ ದಿನ ಕೋಲಾರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಟಿ.ರಾಮಾಚಾರ್ ಗೌರಿಬಿದನೂರಿಗೆ ಬಂದಿಳಿದರು. ಡಾ.ಪಟ್ಟಾಭಿಸೀತಾರಾಮಯ್ಯನವರನ್ನು ಭೇಟಿಮಾಡಲು ಹೋಗಿದ್ದ ಕಾಂಗ್ರೆಸ್ ನಾಯಕರಾದ ಎನ್.ಸಿ.ತಿಮ್ಮಾರೆಡ್ಡಿ ಅವರು ಬೆಂಗಳೂರಿಗೆ ಬಂದಿಳಿದ ಕೂಡಲೇ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ್‌ರವರು ಅವರ ಮೇಲೆ ೧೪೪ ನೇ ಸೆಕ್ಷನ್ ಪ್ರಕಾರ ಪ್ರತಿಬಂಧಕಾಜ್ಞೆ ವಿಧಿಸಿ ಅವರು ಮೂರು ತಿಂಗಳುಗಳ ಕಾಲ ಬೆಂಗಳೂರಿನಲ್ಲಿಯೂ ಮತ್ತು ಅದರ ೫ ಮೈಲಿಗಳ ವ್ಯಾಪ್ತಿಯಲ್ಲಿ ಎಲ್ಲೂ ಯಾವ ಭಾಷಣಗಳನ್ನು ಮಾಡಬಾರದೆಂದು ಆಜ್ಞೆ ಹೊರಡಿಸಿದರು.

೧೯೩೮ ಏಪ್ರಿಲ್ ೨೫ ರಂದು ಬೆಳಿಗ್ಗೆ ೧೦.೩೦ ಗಂಟೆಗೆ ಚಿಕ್ಕಬಳ್ಳಾಪುರ ಜಿಲ್ಲೆಯ ಕರ್ನಾಟಕ–ಆಂಧ್ರಪ್ರದೇಶದ ಗಡಿಗೆ ಸಮೀಪವಿರುವ ವಿದುರಾಶ್ವತ್ಥ ಗ್ರಾಮದ ತೆರೆದ ಮೈದಾನದಲ್ಲಿ ಕಾಂಗ್ರೆಸ್ ನೇತೃತ್ವದಲ್ಲಿ ಗ್ರಾಮಗಳ ಗುಂಪು ರಾಷ್ಟ್ರಧ್ವಜ ಹಾರಿಸಲು ಕಾರ್ಯಕ್ರಮ ಹಮ್ಮಿಕೊಂಡಿತ್ತು. ಇದರ ಸುಳಿವನ್ನರಿತ ಕೋಲಾರ ಜಿಲ್ಲಾ ನ್ಯಾಯಾಧೀಶರು ತಾಲ್ಲೂಕಿನಾದ್ಯಂತ ೧೪೪ ವಿಧಿ ಹೊರಡಿಸಿ ಧ್ವಜಾವಂದನೆ, ಮೆರವಣಿಗೆ, ಸಭೆ, ಸಮಾರಂಭಗಳನ್ನು ನಡೆಸದಂತೆ ಬ್ರಿಟಿಷ್ ಸರ್ಕಾರ ನಿಷೇಧಾಜ್ಞೆ ಹೇರಿತು. ನಿಷೇಧಾಜ್ಞೆಗಳನ್ನು ಉಲ್ಲಂಘಿಸಿ ಬ್ರಿಟಿಷರ ದೌರ್ಜನ್ಯದ ವಿರುದ್ಧ ಸಿಡಿದೆದ್ದ ಜನತೆ ಭಾರತ್ ಮಾತಾಕಿ ಜೈ ಎಂದು ಘೋಷಣೆ ಕೂಗುತ್ತಾ ಹೋರಾಟ ಮುಂದುವರಿಸಿದರು. ಅವಿಭಜಿತ ಕೋಲಾರ ಜಿಲ್ಲೆಯಾದ್ಯಂತ ಸ್ವಾತಂತ್ರ್ಯ ಸೇನಾನಿಗಳು, ದೇಶಾಭಿಮಾನಿ ಕಾರ್ಯಕರ್ತರು ಭಾರಿ ಸಂಖ್ಯೆಯಲ್ಲಿ ವಿದುರಾಶ್ವತ್ಥದಲ್ಲಿ ಜಮಾವಣೆ ಗೊಂಡರು.

ಗೌರಿಬಿದನೂರಿನಿಂದ ಹಾಗೂ ಸುತ್ತಮುತ್ತಲ ಹಲವಾರು ಗ್ರಾಮಗಳಿಂದ ಮೆರವಣಿಗೆಗಳು ಹಲವು ಗುಂಪುಗಳಲ್ಲಿ ಹೊರಟು ವಿದುರಾಶ್ವತ್ಥ ತಲುಪಿದವು. ಇದರ ಜೊತೆ ಜೊತೆಯಲ್ಲಿ ಧ್ವಜಾರೋಹಣ ನಂತರ ಬಹಿರಂಗ ಸಭೆ ನಡೆಸಲು ಸಕಲ ಸಿದ್ಧತೆಗಳು ಆಗ ತೊಡಗಿದವು. ವಿ.ರಾಮಚಂದ್ರ ನೇತೃತ್ವದಲ್ಲಿ ಸತ್ಯಾಗ್ರಹಿಗಳ ತಂಡ ವಿದುರಾಶ್ವತ್ಥದ ದೇವಸ್ಥಾನ ಹಿಂಭಾಗದಲ್ಲಿ ನಿರ್ಮಿಸಿದ ಸಭಾ ವೇದಿಕೆಗೆ ಧ್ವಜಾರೋಹಣ ಮಾಡಲು ಹೊರಟರು ಹಾಗೂ ಕಾಂಗ್ರೆಸ್ ಶ್ರೀನಿವಾಸ್‌ರಾವ್

ರವರ ನೇತೃತ್ವದಲ್ಲಿ ಧ್ವಜಾರೋಹಣ ಮಾಡಲು ಸಭಾ ವೇದಿಕೆಗೆ ಬಂದ ಸತ್ಯಾಗ್ರಹಿಗಳನ್ನು ಮತ್ತು ಮುಖಂಡರನ್ನು ಪೊಲೀಸರು ಬಂಧಿಸಿದರು. ಇದನ್ನು ನೋಡುತ್ತ ನಿಂತ ಜನ ಸಮೂಹ ವೀರಾವೇಶದಿಂದ ಭಾರತ್ ಮಾತಾಕಿ ಜೈ ಜೈಕಾರಗಳನ್ನು ಹಾಕಿದರು. ಪೋಲಿಸ್ ಅಧಿಕಾರಿಗಳು ಸುತ್ತುವರಿದಿದ್ದರೂ ವೇದಿಕೆಯ ಮುಂದೆ ಜನ ಸಮೂಹದ ಜೊತೆಗೆ ಸತ್ಯಾಗ್ರಹಿಗಳು ಬಂದು ಸೇರಿದರು.

ಬೆಂಗಳೂರಿನಿಂದ ಸುಮಾರು ೮೦ ಮಂದಿ ಮೀಸಲು ಪೊಲೀಸರು ಸಹ ವಿದುರಾಶ್ವತ್ಥಕ್ಕೆ ಬಂದಿಳಿದರು. ಗೌರಿಬಿದನೂರಿನಿಂದ ಟಿ.ರಾಮಾಚಾರ್‌ರವರ ನಾಯಕತ್ವದಲ್ಲಿ ಹೊರಟ ಸತ್ಯಾಗ್ರಹಿಗಳ ತಂಡದ ಮೆರವಣಿಗೆ ಬೆಳಿಗ್ಗೆ ೧೦.೩೦ ಗಂಟೆಗೆ ವಿದುರಾಶ್ವತ್ಥ ತಲುಪಿತು. ಆ ವೇಳೆಗೆ ನಾನಾ ಕಡೆಯಿಂದ ಬಂದಿದ್ದ ಸಾವಿರಾರು ಜನ ಮೆರವಣಿಗೆಯಲ್ಲಿ ಸೇರಿ ಕೊಂಡರು. ಪೊಲೀಸ್ ದಾಖಲೆಗಳ ಪ್ರಕಾರ ಅಲ್ಲಿ ನೆರೆದಿದ್ದವರ ಸಂಖ್ಯೆ ಸುಮಾರು ೭೦೦೦, ಅನಂತರ ಈ ಸಂಖ್ಯೆಯನ್ನು ಸುಮಾರು ಹತ್ತು ಸಾವಿರ ಎಂದು ಹೇಳಲಾಗಿದೆ. ಆದರೆ ಪ್ರತ್ಯಕ್ಷದರ್ಶಿಗಳ ಪ್ರಕಾರ ಅಲ್ಲಿ ಸೇರಿದ್ದ ಜನಸಂಖ್ಯೆಯು ಸುಮಾರು ೨೫೦೦೦ ಇತ್ತು ಎಂದಿದ್ದಾರೆ. ಇಲ್ಲಿಗೆ ಆಗಮಿಸಿದ ಪ್ರತಿಯೊಬ್ಬ ಮುಖಂಡರು ಅಶ್ವತ್ಥವೃಕ್ಷಕ್ಕೆ ಪ್ರದಕ್ಷಿಣೆ ಹಾಕಿ ವೇದಿಕೆಯ ಕಡೆ ಹೋದರು. ಮೊದಲಿಗೆ ವೇದಲವೇಣಿಯಾ ಸೂರಣ್ಣ ಮತ್ತು ಗೌರಿಬಿದನೂರಿನ ನಾರಾಯಣಸ್ವಾಮಿ ಅಜ್ಞೆ ಉಲ್ಲಂಘಿಸಿ ಧ್ವಜ ಹಾರಿಸಿ ಬಂಧಿತರಾದರು. ನಂತರ ಶ್ರೀನಿವಾಸರಾವ್ ಮತ್ತು ಕೆ.ಸುಬ್ಬರಾವ್ ಆದೇಶ ಉಲ್ಲಂಘಿಸಿ ಬಂಧಿತರಾದರು. ಇದರಿಂದ ಗುಂಪು ಉದ್ರಿಕ್ತವಾಗಲಾರಂಭಿಸಿತು.

ಟಿ.ರಾಮಾಚಾರ್‌ರವರ ನಾಯಕತ್ವದಲ್ಲಿ ಹೊರಟ ಸತ್ಯಾಗ್ರಹಿಗಳ ತಂಡ ದೇವಸ್ಥಾನದ ಹಿಂಭಾಗದಲ್ಲಿ ನಿರ್ಮಿಸಿದ್ದ ಸಭಾ ವೇದಿಕೆಗೆ ಧ್ವಜಾರೋಹಣ ಮಾಡಿ, ಭಾಷಣ ಮಾಡಲು ಹೋದರು. ಇದರ ಸೂಚನೆಯನ್ನು ಅರಿತ ಮ್ಯಾಜಿಸ್ಟ್ರೇಟರು ಟಿ.ರಾಮಾಚಾರ್ ಅವರಿಗೆ ಭಾಷಣ ಮಾಡದೆ ಮೊದಲು ಅಲ್ಲಿಂದ ಹೋಗುವಂತೆ ಆದೇಶಿಸಿದರು. ಟಿ.ರಾಮಾಚಾರ್ ಅವರು ಸನ್ನಿವೇಶದ ತೀವ್ರತೆಯನ್ನು ಅರಿತು ತಮ್ಮ ಅನುಯಾಯಿಗಳ ಜೊತೆಗೆ ಅಲ್ಲಿಂದ ಹೊರಟರು.



ಆದರೆ ಏಪ್ರಿಲ್ ತಿಂಗಳ ಬಿಸಿಲಿನ ಝಳ ತೀಕ್ಷ್ಣವಾಗಿದ್ದರಿಂದ ಚಳುವಳಿಗಾರರು ಸ್ವಲ್ಪ ಸಮಯ ನೆರಳಲ್ಲಿ ವಿಶ್ರಮಿಸಿಕೊಂಡು ನಂತರ ಹೋಗುವುದಾಗಿ ತಿಳಿಸಿದರು. ಆದರೆ ಅದಕ್ಕೆ ಅವಕಾಶ ನೀಡದ ಮ್ಯಾಜಿಸ್ಟ್ರೇಟರು ಅವರನ್ನು ಚದುರುವಂತೆ ಹೇಳಿ ಲಾಠಿಚಾರ್ಜ್ ಮಾಡಿದಾಗ ಉದ್ರಿಕ್ತರಾದ ಜನ ಎಳನೀರಿನ ಚಿಪ್ಪು, ಕಲ್ಲು ಮತ್ತು ಇಟ್ಟಿಗೆಗಳನ್ನು ಪೊಲೀಸರ ಕಡೆ ತೋರಲಾರಂಭಿಸಿದರು, ನಾಯಕರ ಗುಂಪಿನ ಮೇಲೆ ಲಾಠಿ ಪ್ರಹಾರ ಮಾಡಿದ ಪೊಲೀಸರ ದೌರ್ಜನ್ಯಕ್ಕೆ ಜನರು ಕೆರಳಿ ವೀರಾವೇಶಕ್ಕೆ ಒಳಗಾದರು. ಜನರ ಉದ್ರಿಗ್ನತೆಯನ್ನು ಹತ್ತಿಕ್ಕಲು ಪೊಲೀಸರು ಲಾಠಿಪ್ರಹಾರ ಮಾಡಿದರು. ಲಾಠಿ ಪ್ರಹಾರಕ್ಕೆ ಜಗ್ಗಲಿಲ್ಲ.

ಪೊಲೀಸ್ ಅಧಿಕಾರಿಗಳು ಗೋಲಿಬಾರ್‌ಗೆ ಆಜ್ಞೆ ಮಾಡಿದರು. ಒಂದು ಕಡೆ ಗುಂಡಿನ ಸುರಿಮಳೆ, ಇನ್ನೊಂದು ಕಡೆ ಜನರ ಹಾಹಾಕಾರ ಹೆಚ್ಚಾಯಿತು. ಪೋಲಿಸರ ನರಬೇಟೆಯಿಂದ ಪ್ರಶಾಂತವಾಗಿದ್ದ ವಿದುರಾಶ್ವತ್ಥ ರಣರಂಗವಾಯಿತು. ನಿರಪರಾಧಿಯಾದ ಜನರು ಇಕ್ಕಟ್ಟಿನ ಸ್ಥಳಗಳಲ್ಲಿ ಸಿಲುಕಿ ಕೊಂಡರು. ಆಗ ಒಟ್ಟು ೯೬ ಸುತ್ತು ಗುಂಡುಗಳನ್ನು ಹಾರಿಸಲಾಯಿತು ಎಂದು ವರದಿಯಲ್ಲಿ ತಿಳಿಸಲಾಗಿದೆ. ಈ ದಾಳಿಯಲ್ಲಿ ೩೨ ಜನರು ಮೃತಪಟ್ಟರು, ೧೦೦ ಕ್ಕೂ ಹೆಚ್ಚು ಜನರು ಗಾಯಗೊಂಡರು. ಬಲಿದಾನ ಮಾಡಿದವರಲ್ಲಿ ೧೦ ದೇಹಗಳು ಮಾತ್ರ ಪತ್ತೆಯಾದವು. ಈ ದುರ್ಘಟನೆಯಲ್ಲಿ ಖಾಸಿಸಾಬಿ–ವಿರುಪಸಂದ್ರ, ಗಚ್ಚಗಾರಿನರಸಪ್ಪ–ಗೊಲ್ಲಹಳ್ಳಿ, ಮರಳೂರು ಗೌರಮ್ಮ, ಚಿನ್ನಣ್ಣ–ಬಾದಮರಳೂರು, ನರಸಪ್ಪ–ರಾಮಚಂದ್ರಪುರ, ನಾಗಂ ಮಲ್ಲಯ್ಯ–ಕರೇಡಪಲ್ಲಿ, ನಾಮ ಅಶ್ವತ್ಥನಾರಾಯಣಶೆಟ್ಟಿ– ಗೌರಿಬಿದನೂರು, ಭಜಂತ್ರಿ ಭೀಮಣ್ಣ–ಇಡಗೂರು, ಬೈಯಣ್ಣ–ಕರೇಡಪಲ್ಲಿ, ಸೂಲಗಿತ್ತಿ ನರಸಪ್ಪ–ಚೌಳೂರು, ಹನುಮಂತಪ್ಪ.ಎಂ–ಮರಳೂರು, ಲಕ್ಷ್ಮಯ್ಯ–ಗುಡಿಬಂಡೆ, ವೆಂಕಟಗಿರಿಯಪ್ಪ–ಗೌರಿಬಿದನೂರು, ಸೇರಿದಂತೆ ೩೨ ದೇಶಭಕ್ತರು ಸ್ಥಳದಲ್ಲೇ ಪ್ರಾಣತೆತ್ತರೆ, ನೂರಾರು ಜನರು ಗಾಯಗೊಂಡರು.

ಈ ದುರ್ಘಟನೆಯಲ್ಲಿ ಸತ್ತವರ ಪೈಕಿ ವಿದುರನಾರಾಯಣನ ಪೂಜೆಯಲ್ಲಿ ತೊಡಗಿದ್ದ (ಅಶ್ವತ್ಥವೃಕ್ಷ ಪ್ರದಕ್ಷಿಣೆ ಮಾಡುತ್ತಿದ್ದ) ತುಂಬು ಗರ್ಭಿಣಿ ಮರಳೂರು ಗೌರಮ್ಮನವರು ಒಬ್ಬರು. ಈ ಸುದ್ದಿ ಕಾಳ್ಗಿಚ್ಚಿನಂತೆ ದೇಶದಾದ್ಯಂತ ಹರಡಿತು.

ಚಿಕ್ಕಬಳ್ಳಾಪುರದ ಕೆ.ಸಂಪಂಗಿರಾಮಯ್ಯ, ಕೆ.ವೆಂಕಟಪ್ಪ, ಕೆ.ವೆಂಕಟಕೃಷ್ಣಪ್ಪ, ಸಂಪತ್ ಕುಮಾರನ್, ಯಲ್ಲೂದು ನರಸಿಂಹಯ್ಯ, ಎ.ಸಿ.ಹನುಮಂತಯ್ಯ, ಎ.ಮುನಿಯಪ್ಪ, ಮುಂತಾದವರು ನಿಷೇಧಾಜ್ಞೆ ಮುರಿದು ಸತ್ಯಾಗ್ರಹ ನಡೆಸುವ ಮೂಲಕ ಬಂಧನಕ್ಕೊಳಗಾಗಿ ಮೂರು ತಿಂಗಳು ಕಾರಗೃಹದಲ್ಲಿದ್ದರು. ಈ ದುರಂತವನ್ನು ಖಂಡಿಸಿ ಮೇಲೂರಿನವರು ಸಂಘಟಿಸಿದ್ದ ಶಿಡ್ಲಘಟ್ಟ ತಾಲ್ಲೂಕು ಸಭೆಗೆ ಮಹಾದೇವ ದೇಸಾಯಿ ಸೇರಿದಂತೆ ಅನೇಕ ನಾಯಕರು ಭಾಗವಹಿಸಿದ್ದು ಉಲ್ಲೇಖಾರ್ಹವಾಗಿತ್ತು. ವಿದುರಾಶ್ವತ್ಥ ದುರಂತವನ್ನು ಪ್ರತಿಭಟಿಸಿ ಬೆಂಗಳೂರಿನ ಚಿಕ್ಕಲಾಲಬಾಗಿನಲ್ಲಿ ನಡೆದ ಬೃಹತ್ ಸಭೆಯಲ್ಲಿ ಕೆ.ಸಿ.ರೆಡ್ಡಿ ಹಾಗೂ ಎನ್.ಸಿ.ತಿಮ್ಮಾರೆಡ್ಡಿ ಭಾಷಣ ಮಾಡಿದ ಸಂಧರ್ಭದಲ್ಲಿ ಲಾಠಿ ಚಾರ್ಜು ಆಗಿ ಪೆಟ್ಟು ತಿಂದವರಲ್ಲಿ ಪಿಲ್ಲಗುಂಡ್ಲಹಳ್ಳಿಯ ಪಿ.ವಿ.ಸೀತಾರಾಮ ಕಾಂತನಂದಜಿಯವರು ಒಬ್ಬರು. ಮೋತಕಪಳ್ಳಿಯ ಎಂ.ವಿ.ಕೃಷ್ಣಪ್ಪ ಹಾಗೂ ಕ್ಯಾಸಂಬಳ್ಳಿಯ ಕೆ.ಸಿ.ರೆಡ್ಡಿಯವರು ಬೆಂಬಲಿಗರಾಗಿದ್ದು ಆಂದೋಲನದಲ್ಲಿ ಪಾಲ್ಗೊಂಡಿದ್ದರು.

ಅದರ ಬೆನ್ನಲ್ಲೇ ಶಾಲಾ–ಕಾಲೇಜುಗಳು ಮುಚ್ಚಲ್ಪಟ್ಟು, ಪ್ರತಿಭಟನಾ ಮೆರವಣಿಗೆಗಳು ಚಿಕ್ಕಬಳ್ಳಾಪುರ ಸೇರಿದಂತೆ ಜಿಲ್ಲೆಯಾದ್ಯಂತ ನಡೆದವು. ಸರ್ಕಾರ ವಸ್ತುಸ್ಥಿತಿಯನ್ನು ಜನಕ್ಕೆ ತಿಳಿಸುವ ಬದಲು ವಿಶ್ವಕರ್ನಾಟಕ, ತಾಯಿನಾಡು, ಜನವಾಣಿ ಪತ್ರಿಕೆಗಳ ಪ್ರಕಟಣೆಯನ್ನೇ ಪ್ರತಿಬಂಧಿಸಿ ಅಜ್ಞೆ ಮಾಡಿತು. ಆ ಸಮಯದಲ್ಲಿ ಗುಡಿಬಂಡೆಯ ರಾಮರಾಯರು ಗಾಯಾಳುಗಳಿಗೆ ಶುಶ್ರೂಷೆ ಮಾಡಿ, ವರದಿ ತಯಾರಿಸಿ ರುಮಾಲೆ ಚನ್ನಬಸವಯ್ಯ ಮತ್ತು ನಂಜುಂಡರಾವ್ ಮೂಲಕ ಲಂಡನ್ನಿನ ಪಿ.ಟಿ.ಐ ಮತ್ತು ಬಿ.ಬಿ.ಸಿಗಳಿಗೆ ಸುದ್ದಿ ಮುಟ್ಟಿಸಿದರು. ಈ ದುರಂತದ ಸುದ್ದಿಯನ್ನು ಬಾನುಲಿ ಪ್ರಚಾರ ಮಾಡಿ ಸರ್ಕಾರದ ಈ ಪೈಶಾಚಿಕ ಕೃತ್ಯವನ್ನು ಖಂಡಿಸಿತು.

ದೇಶಭಕ್ತರು ಬ್ರಿಟಿಷರ ಗುಂಡಿಗೆ ಬಲಿಯಾಗಿ ಪ್ರಾಣಾರ್ಪಣೆ ಮಾಡಿದ್ದು ಈ ನೆಲದ ಜನರ ಅಪ್ರತಿಮ ದೇಶಭಕ್ತಿಗೆ ಹಾಗೂ ಬ್ರಿಟಿಷ್ ಆಡಳಿತದ ಬರ್ಬರತೆಗೆ ಸಾಕ್ಷಿಯಾಗಿದೆ. ಸ್ವಾತಂತ್ರ್ಯ ಸಮರದಲ್ಲಿ ಕರ್ನಾಟಕದಲ್ಲಿ ನಡೆದ ಅತೀ ಭೀಕರ ಹತ್ಯಾಕಾಂಡಗಳಲ್ಲಿ ಒಂದಾದ ವಿದುರಾಶ್ವತ್ಥದ ಬಲಿದಾನ ಕರ್ನಾಟಕದ ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ಎಂದೂ ಹೆಸರಾಗಿದೆ.



ವಿದುರಾಶ್ವತ್ಥ ಗ್ರಾಮವನ್ನು ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯ ಇತಿಹಾಸದ ಪುಟಗಳಲ್ಲಿ ಕರ್ನಾಟಕದ ಜಲಿಯನ್‌ವಾಲಾಬಾಗ್ ಎಂದು ಗುರುತಿಸಲಾಗುತ್ತದೆ. ಈ ತರಹದ ಘಟನೆ ಪಂಜಾಬಿನ ಅಮೃತಸರದ ಜಲಿಯನ್‌ವಾಲಾಬಾಗ್ ಮೈದಾನದಲ್ಲಿ ನಡೆದಂತಹ ಒಂದು ಹೃದಯವಿದ್ರಾವಕ ಘಟನೆ. ಈ ಘಟನೆ ನಂತರ ಮೈಸೂರು ಸಂಸ್ಥಾನದಲ್ಲಿ ಚಳವಳಿಯ ದಿಕ್ಕೇ ಬದಲಾಯಿತು.

## ಸ್ಥಳೀಯರ ಅಭಿಪ್ರಾಯಗಳು

ಜಿಲ್ಲಾ ಪೋಲಿಸ್ ಅಧೀಕ್ಷಕರಾದ ಎ.ಎಸ್.ಕಲೀಲ್ ಏಕಾಏಕಿ ತನ್ನ ರಿವಾಲ್ವರ್‌ನಿಂದ ನೇರವಾಗಿ ಗುಂಪಿನತ್ತ ಗುಂಡು ಹಾರಿಸಿದಾಗ ಒಬ್ಬ ವ್ಯಕ್ತಿ ನೆಲಕ್ಕುರುಳಿ ಬಿದ್ದ. ನಂತರ ರೈಫಲ್ ಪಡೆಗೆ ಗುಂಡು ಹಾರಿಸಲು ಆದೇಶ ಮಾಡಲಾಯಿತು. ಮಧ್ಯಾಹ್ನ ೧ ಗಂಟೆಯಿಂದ ಎರಡು ಬಾರಿ. ಸಾಯಂಕಾಲ ೫.೪೦ ರಲ್ಲಿ ಒಂದು ಸಾರಿ ಹೀಗೆ ಮೂರು ಸಾರಿ ಒಟ್ಟಾರೆ ೯೬ ಗುಂಡುಗಳನ್ನು ಹಾರಿಸಲಾಯಿತು. ಆಗ ವಿದುರಾಶ್ವತ್ಥದಲ್ಲಿ ಕಂಡು ಬಂದ ಘನಘೋರ ರೌದ್ರದೃಶ್ಯವನ್ನು ಕಲ್ಪಿಸಿಕೊಳ್ಳಲು ವೀರಕೇಸರಿ ಸೀತಾರಾಮಶಾಸ್ತ್ರಿರವರ ಮಗ ಎಂ. ರಾಮಮೂರ್ತಿಯವರು ವಿದುರಾಶ್ವತ್ಥ ದುರಂತ ಪ್ರಕರಣ ಎಂಬ ಕಿರುಹೊತ್ತಿಗೆಯಲ್ಲಿ ಘಟನೆಯನ್ನು ಹೀಗೆ ವಿವರಿಸಿದ್ದಾರೆ.

ಆಗಿನ ದುರಂತ ಪ್ರಕರಣವನ್ನು ಹೀಗೆಂದು ಹೇಳುವುದು ಸಾಧ್ಯವೇ ಇಲ್ಲ ಅದು ಬಹಳ ರೌದ್ರದೃಶ್ಯ ಮೇಲುಗಡೆ ಉರಿಯುತ್ತಿರುವ ಬಿಸಿಲು, ಕೆಳಗಡೆ ಕಾದ ಮರಳು, ಒಂದು ಕಡೆ ಲಾಠಿಪ್ರಹಾರ, ಮತ್ತೊಂದು ಕಡೆ ಗಳಿಗೆ ಗಳಿಗೆ ಸಿಡಿಯುವ ಗುಂಡುಗಳು ಜನರ ಹಾಹಾಕಾರ, ಹೆಂಗಸರು, ಮಕ್ಕಳ ಆರ್ತನಾದ, ಹಕ್ಕಿಪಕ್ಷಿಗಳು ಗುಂಡೇಟಿನಿಂದ ಗರಗರನೆ ತಿರುಗಿ ಕೆಳಕ್ಕೆ ಬೀಳುತ್ತಿದ್ದವು. ಜನಗಳು ಗುಂಡಿನೇಟು ಬಿದ್ದು ಅಯ್ಯೋ ಎಂದು ಚೀರುತ್ತಿದ್ದರು. ಎಲ್ಲಿ ನೋಡಿದರೂ ರಕ್ತದ ಹನಿಗಳು ಬಿದ್ದಿದ್ದವು. ಆ ದಿನ ವಿದುರಾಶ್ವತ್ಥ ಭಯಂಕರವಾದ ಸ್ಮಶಾನವಾಯಿತು. ನಿರಪರಾಧಿಗಳನ್ನು, ನಿಶ್ಯಸ್ತ್ರರನ್ನು ಮಾರಣಹೋಮ ಮಾಡಿದ ಬೇರೊಂದು ಜಲಿಯನ್‌ವಾಲಾಬಾಗ್‌ನಂತಿತ್ತು ಎಂದಿದ್ದಾರೆ.

ಚಳವಳಿಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಮುಖಂಡರು ಮತ್ತು

ವಕೀಲರಾದ ಎಲ್.ಎಸ್.ರಾಜು ಅವರ ಪ್ರಕಾರ ಈ ಗೋಲಿಬಾರಿನಲ್ಲಿ ಒಟ್ಟು ೩೨ ಜನ ಸತ್ತು, ೪೮ ಮಂದಿ ಗಾಯಗೊಂಡರು, ಅಲ್ಲದೆ ತೋಪಿನಲ್ಲಿ ಗೋಲಿಬಾರ್ ಆಗಿರುವುದರಿಂದ ದಟ್ಟವಾಗಿದ್ದ ಮರಗಳ ಮೇಲಿದ್ದ ನೂರಾರು ಹಕ್ಕಿಗಳು, ಕೋತಿಗಳು ಸಹ ಸತ್ತವೆಂಬ ವಿಷಯ ದುರಂತದ ಘೋರತೆ ಹಾಗೂ ಭೀಕರತೆಯನ್ನು ಸೂಚಿಸುತ್ತದೆ, ಈ ಘಟನೆಯಲ್ಲಿ ಸ್ಥಳದಲ್ಲೇ ಮೃತರಾದವರ ಬಗ್ಗೆ ಮತ್ತು ಸತ್ತವರ ಸಂಖ್ಯೆ ಬಗ್ಗೆ ಖಚಿತ ಮಾಹಿತಿ ಸಿಗದಾಯಿತು. ೧೦ ವ್ಯಕ್ತಿಗಳು ಮೃತರಾದರು, ೨೧ ಜನರು ಗಾಯಗೊಂಡರು ಎಂದು ಸರ್ಕಾರಿ ದಾಖಲೆಗಳಲ್ಲಿ ಇದೆ.

ದಿ ಹಿಂದು ಮತ್ತು ಹಿಂದುಪುರದ ಕುಮದ್ವತಿ, ನವಜೀವನ ಪತ್ರಿಕೆಗಳು ೧೪ ರಿಂದ ೩೨ ಜನ ಮೃತಪಟ್ಟಿರುವುದಾಗಿ ವರದಿ ಮಾಡಿದವು. ಆದರೂ ಮೃತರ ಸಂಖ್ಯೆಯ ಬಗ್ಗೆ ಗೊಂದಲ ಹೆಚ್ಚಾಗುತ್ತಾ ಹೋಯಿತು, ಕಾರಣವನ್ನು ಪತ್ರಿಕೆಗಳು ಈ ರೀತಿ ವಿವರಿಸುತ್ತವೆ. ವಿದುರಾಶ್ವತ್ಥದಲ್ಲಿ ಅನೇಕರು ಮೃತರಾದಾಗ ವಾರಸುದಾರರು ೩ ಗಂಟೆಗೂ ಮೊದಲೇ ಹಲವು ಹೆಣಗಳನ್ನು ಸಾಗಿಸಿದರು. ಕೆಲವರು ಹೆದರಿ ತೆಗೆದುಕೊಂಡು ಹೋದರೆ, ಉಳಿದವರನ್ನು ಪೊಲೀಸರು ಹೆದರಿಸಿ ಒತ್ತಾಯ ಮಾಡಿ ತೆಗೆಸಿದರು. ಮಹಜರ್ ಮಾಡುವಾಗ ಕೇವಲ ೮ ಹೆಣಗಳು ಮಾತ್ರ ಅಲ್ಲಿದ್ದವು. ಅಲ್ಲಲ್ಲಿ ಸಿಕ್ಕಿದ್ದ ಹೆಣಗಳನ್ನು ರಾಶಿ ಹಾಕಿದ್ದರು. ಆ ದಿನ ರಾತ್ರಿ ಅಲ್ಲಿ ಡೂಮ್‌ಲೈಟ್‌ಗಳು ಇರಲಿಲ್ಲ. ಅವುಗಳನ್ನು ಅಧಿಕಾರಿಗಳೇ ಪ್ರಾತಃಕಾಲ ತೆಗೆದು ಬಿಟ್ಟಿದ್ದರು. ಶವಗಳನ್ನು ವಾರಸುದಾರರು ತೆಗೆದುಕೊಂಡು ಹೋಗುತ್ತಿದ್ದರು. ವಿದುರಾಶ್ವತ್ಥಕ್ಕೆ ಒಂದೆರಡು ಕಿ.ಮೀ. ಅಂತರದಲ್ಲಿ ಇದ್ದ ಬ್ರಿಟಿಷ್ ಇಂಡಿಯಾ ಪ್ರದೇಶದಿಂದ ಬಂದು ಭಾಗವಹಿಸಿದ್ದ ಕೆಲವು ಸತ್ಯಾಗ್ರಹಿಗಳು ಸಾವಿಗೀಡಾಗಿದ್ದರು. ಆದರೆ ಭಯಭೀತರಾದ ಜನ ಏನನ್ನು ಬಾಯಿ ಬಿಡುತ್ತಿರಲಿಲ್ಲ.

## ಸರ್ಕಾರದ ವರದಿ

ಸರ್ಕಾರವು ಮೇ ೨ ರಂದು ಪ್ರಕಟಣೆ ಹೊರಡಿಸಿ ಪತ್ರಿಕಾ ವರದಿಗಳು ಉತ್ಪ್ರೇಕ್ಷೆಯಿಂದ ಕೂಡಿವೆಯೆಂದು ವಾಸ್ತವವಾಗಿ ೧೦ ಜನರು ಸತ್ತು, ೧೫ ಜನರು ಗಾಯಗೊಂಡಿದ್ದಾರೆಂದು ಘೋಷಿಸಿಕೊಂಡಿತು. ಸಾರ್ವಜನಿಕರ ಪರವಾಗಿ ವಕಾಲತ್ತು ವಹಿಸಿದ್ದ ಇಂಡಿಯನ್ ಸಿವಿಲ್ ಲಿಬರ್ಟಿಸ್ ಯೂನಿಯನ್ ಸಂಘದ ಬೆಂಗಳೂರು ಶಾಖೆ ಅಧ್ಯಕ್ಷರು, ಖ್ಯಾತ ನ್ಯಾಯವಾದಿಗಳು ಆದ ಎಲ್.ಎಸ್.ರಾಜುರವರು ಹಲವಾರು ಗ್ರಾಮಗಳನ್ನು ಸಂದರ್ಶಿಸಿ ಅಂತಿಮವಾಗಿ ೩೨ ಜನರು ಮೃತರಾಗಿರುವರೆಂದು, ೪೨ ಮಂದಿ ಗಾಯಗೊಂಡಿರುವರೆಂದು ವಿಚಾರಣಾ ಆಯೋಗದ ಮುಂದೆ ವಿಚಾರಣೆ ಕಾಲದಲ್ಲಿ ವಾದವನ್ನು ಮಂಡಿಸಿದರು.

ಗುರುತಿಸಲಾದ ಅಥವಾ ಪತ್ರಿಕೆಗಳಲ್ಲಿ ವರದಿಯಾದ ಅಥವಾ ಸಾಕ್ಷಿಗಳು ವಿಚಾರಣಾ ಸಮಿತಿಯ ಎದುರು ಹೇಳಿಕೆಯಲ್ಲಿ ಪ್ರಸ್ತಾಪಿಸಿದ ೧೩ ಹೆಸರುಗಳು ಹೀಗಿವೆ. ಕಾಶಿಂಸಾಬಿ ವಿರೂಪಸಂದ್ರ, ಗಚ್ಚಗಾರಿನರಸಪ್ಪ ಗೊಲ್ಲಹಳ್ಳಿ. ಗೌರಮ್ಮ ಮರಳೂರು, ಚಿನ್ನಣ್ಣಬಾದ ಮರಳೂರು, ನರಸಪ್ಪ ರಾಮಚಂದ್ರಾಪುರ, ನಾಗಂಮಲ್ಲಯ್ಯ ಕರೇಡಪಲ್ಲಿ, ನಾಮಅಶ್ವತ್ಥನಾರಾಯಣಶೆಟ್ಟಿ ಗೌರಿಬಿದನೂರು. ಭಜಂತ್ರಿ ಭೀಮಣ್ಣ ಇಡಗೂರು, ಬೈಯಣ್ಣಕರೇಡಪಲ್ಲಿ, ಸೂಲಗಿತ್ತಿನರಸಪ್ಪ ಚೌಳೂರು, ಹನುಮಂತಪ್ಪ. ಎಂ. ಮರಳೂರು, ಲಕ್ಷ್ಮಯ್ಯ ಗುಡಿಬಂಡೆ, ವೆಂಕಟಗಿರಿಯಪ್ಪ ಗೌರಿಬಿದನೂರು ಆದರೆ ಸಮಿತಿಯು ವಿಶ್ವಾಸನೀಯ ಪುರಾವೆಗಳಿಲ್ಲ ಎಂಬ ಕಾರಣ ನೀಡಿ ಹತ್ತು ಹೆಸರುಗಳನ್ನು ಮಾತ್ರ ಪ್ರಕಟಿಸಿತು.

ಈ ಸುದ್ದಿ ರೇಡಿಯೋ ಮೂಲಕ ರಾಷ್ಟ್ರದಾದ್ಯಂತ ಅಲ್ಲದೆ, ಕೂಡಲೇ ಲಂಡನ್ನಿನಿಂದ ಬಿ.ಬಿ.ಸಿ.ಯಲ್ಲಿ ಪ್ರಸಾರವಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದು ಭಾರತದ ಸ್ವಾತಂತ್ರ್ಯ ಹೋರಾಟದ ಬಗ್ಗೆ ಇತರ ರಾಷ್ಟ್ರಗಳಲ್ಲಿ ಮತ್ತಷ್ಟು ಸಹಾನುಭೂತಿ ವ್ಯಕ್ತವಾಗಲು ಕಾರಣವಾಯಿತು. ಸರ್ಕಾರದ ಈ ಅಮಾನುಷ ದಮನಕಾರಿ ಕಾರ್ಯಕ್ರಮದಿಂದ ರಾಷ್ಟ್ರಮಟ್ಟದ ಎಲ್ಲಾ ಕಾಂಗ್ರೆಸ್ ನಾಯಕರು ದಿಗ್ಭ್ರಾಂತರಾದರು. ರಾಷ್ಟ್ರ ಮಟ್ಟದ ಹಾಗೂ ರಾಜ್ಯದ ಮಟ್ಟದ ಹಲವಾರು ನಾಯಕರು ಈ ಸ್ಥಳಕ್ಕೆ ಭೇಟಿ ನೀಡಿದರು.

ಕೋಲಾರ ಜಿಲ್ಲಾ ಕಾಂಗ್ರೆಸ್ ನಾಯಕರಾದ ಎನ್.ಸಿ.ತಿಮ್ಮಾರೆಡ್ಡಿ ಅವರು ೧೯೩೮ ಏಪ್ರಿಲ್ ೨೯ ರಂದು ವಿದುರಾಶ್ವತ್ಥಕ್ಕೆ ಭೇಟಿ ನೀಡಿದಾಗ ಅಲ್ಲಿ ಅವರು ಎರಡು ತಿಂಗಳುಗಳ ಕಾಲ ಭಾಷಣ ಮಾಡದಂತೆ ನಿಷೇಧಿಸಲಾಯಿತು

ನಂತರ ಅವರು ಬೆಂಗಳೂರಿನ ಚಿಕ್ಕಲಾಲ್‌ಬಾಗ್‌ನಲ್ಲಿ ಖಂಡನಾ ಸಭೆ ನಡೆಸಿದರು. ಅವರನ್ನು ಅಲ್ಲಿ ದಸ್ತಗಿರಿ ಮಾಡಲಾಯಿತು. ಕೋಲಾರ ಜಿಲ್ಲೆಯಾದ್ಯಂತ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಮುಷ್ಕರ ನಡೆಸಿ ಘಟನೆಯನ್ನು ಖಂಡಿಸಿದರು.

ಗಾಂಧೀಜಿಯವರು ಈ ಘಟನೆ ಖಂಡಿಸಿ ಈಗಿನ ಅಧಿಕಾರವನ್ನು ಕಿತ್ತುಹಾಕಿ ಆಡಳಿತದ ಜವಾಬ್ದಾರಿಯನ್ನು ಜನತಾ ಪ್ರತಿನಿಧಿಗಳಿಗೆ ಒಪ್ಪಿಸುವುದೇ ಉತ್ಕೃಷ್ಟ ಹಾಗೂ ಏಕಮಾತ್ರ ಪರಿಹಾರವೆಂದು ಮಹಾರಾಜರಿಗೂ, ದಿವಾನರಾದ ಮಿರ್ಜಾ ಇಸ್ಮಾಯಿಲ್ ಅವರಿಗೂ ಸಂದೇಶ ಕಳುಹಿಸಿದರು, ಸರ್ಕಾರದ ವರ್ತನೆಯನ್ನು ಖಂಡಿಸಿ ಈ ಘಟನೆಯ ವಾಸ್ತವಾಂಶವನ್ನು ತಿಳಿದುಕೊಳ್ಳಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಎಂ.ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಎಂ.ಎ.ದೊರೆಸ್ವಾಮಿ, ಎಸ್.ನಿಜಲಿಂಗಪ್ಪ, ಕೆ.ಟಿ.ಸತ್ಯನಾರಾಯಣಶೆಟ್ಟಿ ಹಾಗೂ ಎಚ್.ಕೆ.ವೀರಣ್ಣಗೌಡರನ್ನು ಒಳಗೊಂಡ ಒಂದು ವಿಚಾರಣಾ ಸಮಿತಿಯನ್ನು ನೇಮಿಸಿತು. ಈ ಸಮಿತಿಯು ಗೌರಿಬಿದನೂರು ತಾಲ್ಲೂಕಿನಾದ್ಯಂತ ಪ್ರವಾಸ ಕೈಗೊಂಡು ಮಾಹಿತಿ ಸಂಗ್ರಹಿಸಿತು.

ವಿದುರಾಶ್ವತ್ಥ ಗ್ರಾಮದ ಸುತ್ತ ಕರ್ಫ್ಯೂ ವಿಧಿಸಿ ಲ್ಯಾನ್ಸರ್ ಮತ್ತು ಮಿಲಿಟರಿಯನ್ನು ನಿಯೋಜಿಸಲಾಯಿತು. ಐಜಿಪಿ ಅವರು ಹಳ್ಳಿಗಳ ಮೇಲೆ ಪ್ಯೂನಿಟಿವ್ ಟ್ಯಾಕ್ಸ್ (ದಂಡನಾತ್ಮಕ ತೆರಿಗೆ) ಎಂಬ ದಂಡದ ತೆರಿಗೆ ವಿಧಿಸಿದರು. ಒಟ್ಟಿನಲ್ಲಿ ಏಪ್ರಿಲ್ ತಿಂಗಳ ಕೊನೆಯ ವಾರ ಮತ್ತು ಮೇ ತಿಂಗಳ ಮೊದಲ ವಾರದ ದಿನಗಳು ಸ್ಥಳೀಯ ಜನರಿಗೆ ಸಂಕಷ್ಟದ ದಿನಗಳಾಗಿದ್ದವು. ಸಂಸ್ಥಾನದಾದ್ಯಂತ ಈ ಘಟನೆಯ ಬಗ್ಗೆ ತೀವ್ರ ಪ್ರತಿಭಟನೆಗಳು, ಖಂಡನಾ ಸಭೆಗಳು ನಡೆದವು.

ಘಟನೆಯ ನಂತರ ತಾಯಿನಾಡು, ನವಜೀವನ ಮತ್ತು ಸಾಧ್ವೀ ಪತ್ರಿಕೆಗಳನ್ನು ಕಪ್ಪುಪಟ್ಟಿಗೆ ಸೇರಿಸಿದ್ದರು. ಸೆನ್ಸಾರ್‌ಗೆ ಗುರಿಯಾಗಿದ್ದ ವಿಶ್ವಕರ್ನಾಟಕ ಮುಂತಾದ ಕನ್ನಡ ಪತ್ರಿಕೆಗಳನ್ನು ನಿಷೇಧಿಸಿ ಏಪ್ರಿಲ್ ೨೯ ರಂದು ಸರ್ಕಾರವು ಆಜ್ಞೆ ಹೊರಡಿಸಿತು. ಈ ಆಜ್ಞೆಯ ಪರಿಣಾಮಗಳನ್ನು ಬಹಳ ದಿನಗಳ ಕಾಲ



ಸರ್ಕಾರ ತಡೆದು ಕೊಳ್ಳಲಾಗದೆ ೧೯೩೮ ಮೇ ೯ ರಂದು ನಿರ್ಬಂಧವನ್ನು ರದ್ದುಪಡಿಸಲಾಯಿತು.

ಮೈಸೂರು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಾದ ಎಚ್.ವಿ ರಾಮಸ್ವಾಮಿಯವರು ಜಿಲ್ಲಾ ನ್ಯಾಯಾಧೀಶರಾದ ಶ್ರೀ ಜಿ.ಅಪ್ಪಾಜಿಗೌಡರಿಗೆ ಪತ್ರ ಬರೆದು ಕಾಂಗ್ರೆಸ್ ಸಮಿತಿಗೆ ಯಾರೇ ಅಧಿಕಾರಿಗಳು, ಯಾವುದೇ ರೀತಿಯ ಸಹಕಾರ ನೀಡದಂತೆ ಆದೇಶಿಸಿದರು. ಜೊತೆಗೆ ಆದೇಶವನ್ನು ಹೊರಡಿಸಿ ಮೇ ೬ ರಂದು ಮದ್ರಾಸ್ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರಾದ ಜಸ್ಟಿಸ್ ವೇಪಾ ರಮೇಶ್‌ಂ ಅಧ್ಯಕ್ಷತೆಯಲ್ಲಿ ಮೂವರು ಸದಸ್ಯರನ್ನು ಒಳಗೊಂಡ ಒಂದು ವಿಚಾರಣಾ ಸಮಿತಿಯನ್ನು ನೇಮಿಸಿತು. ಇದರಿಂದ ಎರಡು ಸಮಿತಿಗಳ ಅವಶ್ಯಕತೆ ಇಲ್ಲವೆಂದು ಕಾಂಗ್ರೆಸ್ ಸಮಿತಿಯನ್ನು ರದ್ದುಗೊಳಿಸಲಾಯಿತು.

೧೯೩೮ ಮೇ ೨೩ ರಂದು ಜಸ್ಟಿಸ್ ವೇಪಾ ರಮೇಶ್‌ಂರವರ ಸಮಿತಿಯ ಸದಸ್ಯರು ತನ್ನ ಮೊದಲ ಭಾರಿ ಕುಳಿತು (ಸಿಟಿಂಗ್‌ಅನ್ನು) ಚರ್ಚಿಸಿತು. ಒಂದುವರೆ ತಿಂಗಳ ಕಾಲ ವಿಚಾರಣೆ ನಡೆಸಿದ ಈ ಸಮಿತಿ ಒಟ್ಟು ೫೭ ಭಾರಿ ಬೆಂಗಳೂರಿನ ಪುರಭವನದಲ್ಲಿ ಕುಳಿತು (ಸಿಟ್ಟಿಂಗ್ಸ್) ೧೪೭ ಸಾಕ್ಷಿಗಳನ್ನು ಸಾರ್ವಜನಿಕರಿಂದ ಪಡೆಯಿತು, ಸಾರ್ವಜನಿಕರ ಪರವಾಗಿ ಎಲ್.ಎಸ್.ರಾಜು ವಾದಿಸಿದರು.

ಸಾರ್ವಜನಿಕ ಪರ ವಕೀಲರಾದ ಎಲ್.ಎಸ್.ರಾಜುರವರು ಗಾಯಾಳುಗಳು ಮತ್ತು ಸಾಮಾನ್ಯ ಜನರು ಬೆಂಗಳೂರಿಗೆ ಬರಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಮಿತಿಯು ಕನಿಷ್ಠ ಶನಿವಾರ ಮತ್ತು ಭಾನುವಾರ ಎರಡು ದಿನಗಳಾದರೂ ಗೌರಿಬಿದನೂರಿನಲ್ಲಿ ಕುಳಿತು (ಸಿಟ್ಟಿಂಗ್ಸ್‌ಗಳನ್ನು) ಮಾಹಿತಿ ಪಡೆಯುವಂತೆ ಒತ್ತಾಯಿಸಿದರು. ಸರ್ಕಾರದ ಸಮಿತಿ ಅವರ ವಾದವನ್ನು ಪುರಸ್ಕರಿಸಲಿಲ್ಲ. ಪೊಲೀಸ್ ಮುಖ್ಯಾಧಿಕಾರಿಗಳನ್ನು ಸಮಿತಿ ಮುಂದೆ ಹಾಜರುಪಡಿಸುವಂತೆ ಪ್ರಾರ್ಥಿಸಿದರು. ಸಮಿತಿ ಅವರನ್ನು ಹಾಜರುಪಡಿಸಲಿಲ್ಲ. ಮೈಸೂರು ಕಾಂಗ್ರೆಸ್ ಸಮಿತಿಯು ೧೯೩೮ ಅಕ್ಟೋಬರ್ ೨೬ ರಂದು ವಿದುರಾಶ್ವತ್ಥ ಸೇರಿದಂತೆ ಸಂಸ್ಥಾನದ ಹಲವು ಕಡೆ ವಿದುರಾಶ್ವತ್ಥ ದಿನವನ್ನು ಆಚರಿಸಿ ಮೃತರ ಆತ್ಮವನ್ನು ಸ್ಮರಿಸಲಾಯಿತು.

ತೀರ್ಪು – ಐದುವರೆ ತಿಂಗಳ ನಂತರ ೧೯೩೮ ನವೆಂಬರ್ ತಿಂಗಳಲ್ಲಿ ಜಸ್ಟಿಸ್ ವೇಪಾ ರಮೇಶ್‌ರವರ ಸಮಿತಿ ವರದಿ ಸಲ್ಲಿಸಿತು. ವರದಿಯಲ್ಲಿ ಬಹುತೇಕ ಸರ್ಕಾರಿ ದಾಖಲೆಗಳಲ್ಲಿರುವ ಅಂಶವನ್ನೇ ಎತ್ತಿಹಿಡಿಯಿತು. ಮುಗ್ಧ ಹಳ್ಳಿಗಾಡಿನ ಜನರನ್ನು ಉದ್ರೇಕಗೊಳಿಸಲು ಕಾಂಗ್ರೆಸ್ ಮುಖಂಡರಾದ ಎನ್.ಸಿ.ನಾಗಯ್ಯರೆಡ್ಡಿ. ಎನ್.ಸಿ.ತಿಮ್ಮಾರೆಡ್ಡಿ, ಅನ್ನಪೂರ್ಣಾದೇವಿತಿಮ್ಮಾರೆಡ್ಡಿ, ಟಿ.ಸಿದ್ದಲಿಂಗಯ್ಯ, ಕೆ.ಸಿ.ರೆಡ್ಡಿ, ಟಿ.ಗಂಗಿರೆಡ್ಡಿ, ಹನುಮಂತಪ್ಪ ಮುಂತಾದ ನಾಯಕರು ಮಾಡಿದ ಶಿಷ್ಟಾಚಾರ ಮತ್ತು ದ್ವೇಷ ಹುಟ್ಟಿಸುವ ಪ್ರಚೋದನಕಾರಿ ಭಾಷಣ ಕಾರಣವೆಂದು ಆರೋಪಿಸಿತು. ಈ ದುರ್ಘಟನೆಗೆ ಕಾಂಗ್ರೆಸ್ಸಿನ ಬೇಜವಾಬ್ದಾರಿ ನಡವಳಿಕೆ ಕಾರಣವೆಂದು ಹೇಳಿ ತಪ್ಪನ್ನು ಕಾಂಗ್ರೆಸ್ ಮೇಲೆ ಹಾಕಿತು. ಈ ಸಮಿತಿಯು ಸರ್ಕಾರದ ಕೈಗೊಂಬೆಯಂತೆ ವರ್ತಿಸಿ ಪಕ್ಷಪಾತ ಧೋರಣೆ ಅನುಸರಿಸಿತು. ಇದು ಜನರ ಕಣ್ಣೊರೆಸುವ ಒಂದು ನಾಟಕ ಎಂಬುದು ಸರ್ವವಿಧಿತವಾಯಿತು.

ಇದರಿಂದ ಕುಪಿತರಾದ ಮುಖಂಡರು ವರದಿಯನ್ನು ಪ್ರತಿಭಟಿಸಿ ೧೯೩೮ ನವಂಬರ್ ೨೬ ರಂದು ವರದಿ ಖಂಡನಾ ದಿನಾಚರಣೆಯನ್ನು ಆಚರಿಸಲಾಯಿತು. ಸರ್ಕಾರದ ಪರವಾಗಿ ತೀರ್ಪಿತ್ತ ವೇಪಾ ರಮೇಶ್‌ಂ ಸಮಿತಿಯ ವರದಿಯನ್ನು ಖಂಡಿಸಿದರು. ಅಂದು ಗೌರಿಬಿದನೂರು ಬಂದ್ ಆಚರಿಸಲಾಯಿತು. ಅದೇ ದಿನ ಸಾರ್ವಜನಿಕ ಆಸ್ಪತ್ರೆಯ ಶಿಲಾನ್ಯಾಸ ನೆರವೇರಿಸಲು ಗೌರಿಬಿದನೂರಿಗೆ ಬಂದಿದ್ದ ದಿವಾನರಾದ ಮಿರ್ಜಾಇಸ್ಮಾಯಿಲ್ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಸಾಗಿ, ವರದಿಯನ್ನು, ದಿವಾನರ ಪ್ರತಿಕೃತಿಯನ್ನು ದಹನ ಮಾಡಲಾಯಿತು.ದಿವಾನರಾದ ಮಿರ್ಜಾಇಸ್ಮಾಯಿಲ್ ಅವರು ಚಳವಳಿಯು ಉಗ್ರರೂಪ ತಾಳುತ್ತಿರುವುದನ್ನು ಗಮನಿಸಿ ಸಮಸ್ಯೆಯ ಪರಿಹಾರಕ್ಕೆ ಗಾಂಧೀಜಿಯವರ ಮಧ್ಯ ಪ್ರವೇಶವನ್ನು ಕೋರಿದರು.

**ಪಟೇಲ್– ಮಿರ್ಜಾ ಒಪ್ಪಂದ – ೧೯೩೮ ಮೇ ೧೭**

ವಿದುರಾಶ್ವತ್ಥ ದುರಂತದಿಂದ ದಿವಾನರಾದ ಮಿರ್ಜಾ ಇಸ್ಮಾಯಿಲ್ ಧೃತಿಗೆಟ್ಟು ಮಹಾತ್ಮರ ಮಧ್ಯಸ್ಥಿತೆಗೆ ಮನವಿ ಸಲ್ಲಿಸಿದರು. ಗಾಂಧೀಜಿಯವರು ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಖುದ್ದಾಗಿ ತಿಳಿದುಕೊಳ್ಳಲು ಸರ್ದಾರ್ ವಲ್ಲಭಾಯಿ ಪಟೇಲ್ ಮತ್ತು ಆಚಾರ್ಯ ಜೆ.ಬಿ.ಕೃಪಾಲನಿ ಅವರನ್ನು ಬೆಂಗಳೂರಿಗೆ ಕಳಿಸಿದರು. ಇವರಿಬ್ಬರು ವಿದುರಾಶ್ವತ್ಥದಲ್ಲಿ ಸ್ಥಳೀಯ ನಾಯಕರೊಡನೆ ಘಟನೆಯ ಬಗ್ಗೆ ಚರ್ಚೆ ನಡೆಸಿದರು. ದುರಂತ ನಡೆದ ಸ್ಥಳಗಳಿಗೆ ಭೇಟಿ ನೀಡಿದರು, ನಂತರ ಜೈಲುಗಳಿಗೆ ಬೇಟಿ ನೀಡಿದರಲ್ಲದೆ ಸರಕಾರದ ಗಣ್ಯರನ್ನು, ಕಾಂಗ್ರೆಸ್ ನಾಯಕರನ್ನು ಬೇಟಿಯಾದರು. ಈ ಭೇಟಿ ಮೇ ೦೬ ರಿಂದ ೦೯, ೧೯೩೮ ರವರೆಗೆ ಮೂರು ದಿನಗಳ ಕಾಲ ನಡೆಯಿತು.

ನಂತರ ಸರ್ಕಾರ ಮತ್ತು ಕಾಂಗ್ರೆಸ್ ಜೊತೆಗೆ ಮೈಸೂರಿನ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಹಾಗೂ ಸರ್ಕಾರದ ದಮನಕಾರಿ ಕ್ರಮಗಳನ್ನು ಕುರಿತಾಗಿ ಚರ್ಚೆ ನಡೆಸಿದರು. ಪರಿಣಾಮವಾಗಿ ಮೇ ೧೭, ೧೯೩೮ ರಂದು ಸರ್ದಾರ್ ವಲ್ಲಭಾಯಿ ಪಟೇಲ್ ಮತ್ತು ಸರ್ ಮಿರ್ಜಾ ಇಸ್ಮಾಯಿಲ್‌ರೊಡನೆ ಒಪ್ಪಂದವಾಯಿತು.

ಈ ಕೆಳಕಂಡ ಎಲ್ಲಾ ಒಪ್ಪಂದದ ಅಂಶಗಳನ್ನು ಒಪ್ಪಿಕೊಂಡ ಸರ್ಕಾರ ಪ್ರಕಟಣೆ ಹೊರಡಿಸಿತು.

೧) ಮೈಸೂರು ಕಾಂಗ್ರೆಸ್ ಸಂಸ್ಥೆಯನ್ನು ಶಾಸನಬದ್ದ ರಾಜಕೀಯ ಪಕ್ಷ ಎಂಬುದಾಗಿ ಅಂಗೀಕರಿಸಲಾಯಿತು.

೨) ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ ಮೈಸೂರು ಧ್ವಜದ ಜೊತೆಗೆ, ರಾಷ್ಟ್ರ ಧ್ವಜವನ್ನು ಹಾರಿಸಲು ಅನುಮತಿ ದೊರೆಯಿತು.

೩) ರಾಜಕುಮಾರ ಜಯಚಾಮರಾಜ ಒಡೆಯರ ವಿವಾಹ ಮಹೋತ್ಸವದ ನೆನಪಿಗಾಗಿ ಎಲ್ಲಾ ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡಿದರು.

೪) ರಾಜಕೀಯ ಸುಧಾರಣಾ ಸಮಿತಿಗೆ ಹಿಂದೆ ನೇಮಕ ಗೊಂಡಿದ್ದ ೪ ಮಂದಿ ಕಾಂಗ್ರೆಸ್ಸಿಗರ ಜೊತೆಗೆ ಇನ್ನೂ ೩ ಜನರನ್ನು (೩+೪=೭) ನೇಮಿಸಿ ಒಟ್ಟು ೭ ಕಾಂಗ್ರೆಸ್ ಸದಸ್ಯರನ್ನು ನೇಮಿಸಲು ಸರಕಾರ ಅಂತಿಮವಾಗಿ ಒಪ್ಪಿಗೆ ನೀಡಿತು.

೫) ಆದರೆ ಸರ್ಕಾರ ಗಡಿಪಾರು ಆಜ್ಞೆಗಳನ್ನು, ಪ್ರತಿಬಂಧಕಾಜ್ಞೆಗಳನ್ನು ಹಿಂತೆಗೆದು ಕೊಳ್ಳಲಿಲ್ಲ.

ದಿನ ದಿನಕ್ಕೂ ಕಾಂಗ್ರೆಸ್ ಸದಸ್ಯರ ವಿರುದ್ಧ ನಿಷೇಧಾಜ್ಞೆಗಳು, ಬಂಧನ, ಶಿಕ್ಷೆ ಅಧಿಕವಾಯಿತು. ಸರ್ಕಾರದ ಮನೋಭಾವವನ್ನು ಖಂಡಿಸಿ ತಮ್ಮ ವಿರೋಧ ವ್ಯಕ್ತಪಡಿಸಲು ಕಾಂಗ್ರೆಸ್ ಸದಸ್ಯರೆಲ್ಲರೂ ಶಾಸಕಾಂಗ ಮತ್ತು ಸ್ಥಳೀಯ ಸಂಸ್ಥೆಗಳ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಿ, ರಾಜ್ಯ ಕಾಂಗ್ರೆಸ್ಸನ್ನು ಬೆಂಬಲಿಸಿದರು. ರಾಜಕೀಯ ಅಸ್ಥಿರತೆಯು ಮೈಸೂರು, ಹಾಸನ, ತುಮಕೂರು, ಶಿವಮೊಗ್ಗ, ಚಿತ್ರದುರ್ಗ, ಕೋಲಾರ ಮೊದಲಾದ ಜಿಲ್ಲೆಗಳಲ್ಲಿ ಹರಡಿತು.

ಕಾಂಗ್ರೆಸ್ ರಚನಾತ್ಮಕ ಕಾರ್ಯಕ್ರಮಗಳಾದ ಅರಣ್ಯ ಸತ್ಯಾಗ್ರಹ, ಪಾನನಿರೋಧ ಚಳವಳಿಗಳನ್ನು ಮೈಸೂರು ಸಂಸ್ಥಾನದಾದ್ಯಂತ ಹಮ್ಮಿಕೊಂಡರು, ವಿದುರಾಶ್ವತ್ಥದಲ್ಲೂ ಪಾನವಿರೋಧ ಚಳವಳಿಯನ್ನು ಹಮ್ಮಿಕೊಳ್ಳಲಾಯಿತು. ಸ್ಥಳೀಯರಾದ ಅನ್ನಪೂರ್ಣಾದೇವಿ, ತಿಮ್ಮಾರೆಡ್ಡಿ ಅವರ ನೇತೃತ್ವದಲ್ಲಿ ಹಲವಾರು ಸಭೆಗಳು ನಡೆದು ಮದ್ಯಪಾನವನ್ನು ನಿಷೇಧಿಸಬೇಕೆಂದು ಕರೆ ನೀಡಿದರು. ಹಲವಾರು ಕಡೆ ಅರಣ್ಯ ಸತ್ಯಾಗ್ರಹವನ್ನು ಸಹ ನಡೆಸಲಾಯಿತು. ಈ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಲು ವಿದುರಾಶ್ವತ್ಥದಲ್ಲಿ ಎರಡನೇ ಕಾಂಗ್ರೆಸ್ ಅಧಿವೇಶನ ನಡೆಸಲು ತೀರ್ಮಾನಿಸಿತು.

## ಮಹಾತ್ಮ ಗಾಂಧೀಜಿಯವರ ಬೇಟಿ

ಮೈಸೂರು ಸಂಸ್ಥಾನದ ಕಾಂಗ್ರೆಸ್ ಸ್ಥಾಪನೆಯ ಬಗ್ಗೆ ಮತ್ತು ಶಿವಪುರ ಧ್ವಜ ಸತ್ಯಾಗ್ರಹದ ಬಗ್ಗೆ ಒಪ್ಪಿಗೆ ಪಡೆಯಲು ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಟಿ.ಸಿದ್ದಲಿಂಗಯ್ಯ ಮತ್ತು ಭೂಪಾಳಂ ಚಂದ್ರಶೇಖರಯ್ಯರವರು ೧೯೩೮ ರ ಮಾರ್ಚ್ ೨೩ ರಂದು ಗಾಂಧೀಜಿಯವರನ್ನು ಉತ್ಕಲದ ಡೆಲಾಂಗಿನಲ್ಲಿ ಗಾಂಧಿ ಸೇವಾ ಸಂಘದ ನಾಲ್ಕನೇ ಅಧಿವೇಶನ ನಡೆಯುತ್ತಿದ್ದಾಗ ಭೇಟಿಯಾದರು. ನಂತರ ೧೯೩೮ ಏಪ್ರಿಲ್ ೨೨ ರಂದು ಮಹಾತ್ಮ ಗಾಂಧೀಜಿ ಅವರನ್ನು ಭೇಟಿಯಾಗಲು ಭೂಪಾಳಂ ಚಂದ್ರಶೇಖರಯ್ಯ, ಬ್ರಹ್ಮಚಾರಿ ರಾಮಚಂದ್ರನ್ ರವರು, ಡಿ.ಹೆಚ್. ಚಂದ್ರಶೇಖರಯ್ಯರವರು ವಾರ್ಧಕ್ಕೆ ಹೊರಟು ದಿನಾಂಕ



ಏಪ್ರಿಲ್ ೨೩ ರ ಬೆಳಿಗ್ಗೆ ವಾರ್ಧ ತಲುಪಿದರು. ಅಲ್ಲಿಂದ ಮಧ್ಯಾಹ್ನ ೧೨ ಘಂಟೆಗೆ ಮಹದೇವ ದೇಸಾಯಿಯವರೊಂದಿಗೆ ವಾರ್ಧ ಆಶ್ರಮ ತಲುಪಿದರು. ಗಾಂಧೀಜಿಯವರಿಗೆ ಮೈಸೂರು ಸಂಸ್ಥಾನದಾದ್ಯಂತ ಸಹಸ್ರಾರು ಜನರ ದಸ್ತಗಿರಿಯಾಗಿದೆ. ಪರಿಸ್ಥಿತಿ ಗಂಭೀರವಾಗಿದೆ, ಆದುದರಿಂದ ತಾವು ಮಾರ್ಗದರ್ಶನ ಮಾಡಬೇಕು ಎಂದು ಮನವಿ ಮಾಡಿದರು. ಎಲ್ಲಾ ನಾಯಕರು ಬಂಧನದಲ್ಲಿ ಇರುವುದರಿಂದ ಹೊರಗಡೆ ಇದ್ದ ಶ್ರೀ ಗುಂಡಪ್ಪಗೌಡರು ತಾತ್ಕಾಲಿಕ ಅಧ್ಯಕ್ಷರಾಗಿದ್ದು ಅವರಿಗೆ ಸಂದೇಶವನ್ನು ಕೊಡಬೇಕು ಎಂದು ಪ್ರಾರ್ಥಿಸಿದರು.

ಗಾಂಧೀಜಿಯವರು ಸಾರ್ವಜನಿಕ ಸಮಾರಂಭಗಳಲ್ಲಿ ರಾಷ್ಟ್ರಧ್ವಜ ಮತ್ತು ಮೈಸೂರು ಧ್ವಜ ಇವೆರಡನ್ನು ಗೌರವಿಸಿ ಎಂದು ಗಾಂಧೀಜಿಯವರು ತಿಳಿಸಿದರು. ಮೈಸೂರು ಕಾಂಗ್ರೆಸ್ ಅಧ್ಯಕ್ಷರು, ಸರ್ಕಾರದೊಂದಿಗೆ ಸಮಾಧಾನದಿಂದ ವರ್ತಿಸಿ ಗೌರವಯುತವಾದ ಒಪ್ಪಂದಕ್ಕೆ ಬರುವಂತೆಯೂ ಹಾಗೂ ಸರ್ಕಾರವು ಜೈಲಿನಲ್ಲಿ ಇರುವವರನ್ನು ಬಿಡುಗಡೆ ಮಾಡಿಸುವಂತೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಿಗೆ ಪತ್ರ ಬರೆಸಿದರು.

ಈ ಪತ್ರದೊಂದಿಗೆ ಬ್ರಹ್ಮಚಾರಿ ರಾಮಚಂದ್ರನ್, ಶ್ರೀ. ಡಿ.ಹೆಚ್. ಚಂದ್ರಶೇಖರಯ್ಯರವರು ಬಾಂಬೆಗೆ ಬಂದು ಸರ್ದಾರ್ ವಲ್ಲಬಾಯಿ ಪಟೇಲ್ ಮತ್ತು ಅಖಿಲ ಭಾರತ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾಗಿದ್ದ ಆಚಾರ್ಯ ಕೃಪಲಾನಿಯವರನ್ನು ೧೯೩೮ ಏಪ್ರಿಲ್ ೨೭ ನೇ ತಾರೀಖು ಭೇಟಿಯಾದರು. ಆಚಾರ್ಯ ಕೃಪಲಾನಿಯವರನ್ನು ಭೇಟಿ ಮಾಡುವ ವೇಳೆಗೆ ಮೈಸೂರಿನಿಂದ ವಿದುರಾಶ್ವತ್ಥದಲ್ಲಿ ಗೋಲಿಬಾರ್‌ನ ಬಗ್ಗೆ ಸುದ್ದಿ ತಿಳಿಯಿತು. ಮತ್ತೆ ಹಿಂತಿರುಗಿ ಏಪ್ರಿಲ್ ೨೮ ನೇ ತಾರೀಖು ಗಾಂಧೀಜಿಯವರನ್ನು ವಾರ್ಧಾದಲ್ಲಿ ಭೇಟಿಯಾದರು. ಗಾಂಧಿಜೀಯವರು ವಿಷಯವನ್ನು ತಿಳಿದು ವಿಷಾದ ವ್ಯಕ್ತಪಡಿಸುತ್ತಾ ಹಿಂದೆ ಕೊಟ್ಟಿದ್ದ ಪತ್ರವನ್ನು ರದ್ದುಗೊಳಿಸಿ, ಇಷ್ಟೊಂದು ಜನರ ಪ್ರಾಣಾಹುತಿಯು ಮೈಸೂರಿನ ಜನತೆ ಶೀಘ್ರದಲ್ಲಿಯೇ ಸ್ವಾತಂತ್ರ್ಯವನ್ನು ಪಡೆಯಲು ದಾರಿಯಾಯಿತು ಎಂದರು. ಗಾಂಧೀಜಿಯವರು ಮಾತನಾಡುತ್ತಾ ಕಡೆಗೂ ಧರ್ಮಕ್ಕೆ ವಿಜಯವೆಂಬ ಅಚಲ ಶ್ರದ್ಧೆಯಿಂದ ಜೀವಿಸಬೇಕು, ಈ ಶ್ರದ್ಧೆಯಿಂದಲೇ ನಾನು ಜೀವಿಸುತ್ತಿದ್ದೇನೆ. ಕಾಯಾ–ವಾಚಾ–ಮನಸಾ ಆಹಿಂಸೆಯನ್ನು ಪಾಲಿಸಬೇಕು. ನೀವು ಜಯ

ಪಡೆಯುವಿರಿ. ಮೈಸೂರಿಗೆ ಇದೇ ನನ್ನ ಸಂದೇಶ, ಇನ್ನು ತೆರಳಿ, ನನ್ನ ಆಶೀರ್ವಾದ ನಿಮಗಿದೆ. ದೇವರನ್ನು ಪ್ರಾರ್ಥಿಸಿರಿ. ಮೈಸೂರಿನ ನಾಗರಿಕರು ನೀವು ಜಯ ಪಡೆಯುವಿರಿ, ಸಂಸ್ಥಾನದ ಜನರು ಶಾಂತಿ ಮತ್ತು ಸಂತೋಷದಿಂದ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಲು ಸಿದ್ಧರಿರಬೇಕೆಂದು ಭೂಪಾಳಂ ಚಂದ್ರಶೇಖರಯ್ಯನವರ ಮೂಲಕ ಸಂದೇಶವನ್ನು ಕಳುಹಿಸಿದರು. ಜೊತೆಗೆ ವಿದುರಾಶ್ವತ್ಥಕ್ಕೆ ಹೋಗಿ ನಿಖರವಾದ ಮತ್ತು ನಿಷ್ಪಕ್ಷಪಾತವಾದ ವರದಿಯನ್ನು ಕಳುಹಿಸ ಬೇಕೆಂದು ಹೇಳಿದರು.

ವಾಧ್ರಾದಿಂದ ಬೆಂಗಳೂರಿಗೆ ಆಗಮಿಸಿ ಶ್ರೀ ಗುಂಡಪ್ಪ ಗೌಡರು, ಕೆಂಗಲ್ ಹನುಮಂತಯ್ಯನವರು, ಸಾಹುಕಾರ ಚೆನ್ನಯ್ಯನವರು, ಮೈಸೂರಿನ ಲಕ್ಷ್ಮೀನಾರಾಯಣ ರಾಯರು, ಎಂ.ಎ ದೊರೆಸ್ವಾಮಿ ಅಯ್ಯಂಗಾರ್ ಮುಂತಾದ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಂದರ್ಶಿಸಿ, ಸಮಾಲೋಚಿಸಿ, ಬಲಿದಾನಿಗಳ ಪಡೆ ಸ್ಥಾಪಿಸಿದರು. ಭೀಮಪ್ಪನಾಯಕರು ಬಲಿದಾನಿಗಳ ಪಡೆಯ ಅಧ್ಯಕ್ಷರಾದರು.ತಗಡೂರು ರಾಮಚಂದ್ರರಾಯರು ಮತ್ತು ಅವರ ಗೆಳೆಯರು ಸದಸ್ಯರುಗಳಾದರು.

ಮುಳಬಾಗಿಲು ತಾಲ್ಲೂಕಿನ ಪದಕಾಷ್ಠಿಯವರಾದ ಪಿ.ರಾಮೇಗೌಡರು ೧೯೩೮ ರ ಸತ್ಯಾಗ್ರಹದ ನಂತರ ಬಂಧನಮುಕ್ತರಾಗಿ ಬಂದಿದ್ದರು. ಹೆಚ್.ಸಿ.ದಾಸಪ್ಪ ಹಾಗೂ ಯಶೋಧರಾದಾಸಪ್ಪ ಅವರು ಮಾಡಿದ ಭಾಷಣದಿಂದ ಪ್ರಭಾವಿತರಾಗಿ, ಪುಟ್ಟಣ್ಣನವರೊಂದಿಗೆ ಹಳ್ಳಿ–ಹಳ್ಳಿಗೆ ಹೋಗಿ ಕಾಂಗ್ರೆಸ್‌ಗೆ ಸದಸ್ಯರನ್ನು ನೊಂದಾಯಿಸುವ ಕಾರ್ಯದಲ್ಲಿ ನಿರತರಾದರು. ಅಲ್ಲದೆ ಕೆ.ಸಿ.ರೆಡ್ಡಿ, ಪಟ್ಟಾಭಿರಾಮನ್, ಟಿ.ರಾಮಾಚಾರ್, ಎನ್.ಸಿ.ನಾಗಯ್ಯರೆಡ್ಡಿ ಮುಂತಾದ ನಾಯಕರ ಭಾಷಣಗಳನ್ನು ಗ್ರಾಮೀಣ ಪ್ರದೇಶದಲ್ಲಿ ಏರ್ಪಡಿಸುವ ಮೂಲಕ ಕಾಂಗ್ರೆಸ್ಸಿನ ಜನಪ್ರಿಯತೆಗೆ ಕಾರಣರಾದರು.

## ವಿದುರಾಶ್ವತ್ಥದಲ್ಲಿ ಎರಡನೇ ಕಾಂಗ್ರೆಸ್ ಅಧಿವೇಶನ. ೧೯೩೯ ಏಪ್ರಿಲ್ ೧೭.

ಮೈಸೂರು ಕಾಂಗ್ರೆಸ್ ಸಮಿತಿಯು ಈ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ಎನ್.ಸಿ.ತಿಮ್ಮಾರೆಡ್ಡಿ ಅವರನ್ನು ನೇಮಕ ಮಾಡಿತು. ಅಧಿವೇಶನದ ಅಧ್ಯಕ್ಷರನ್ನಾಗಿ ಹೆಚ್.ಸಿ.ದಾಸಪ್ಪ ಅವರನ್ನು ಆಯ್ಕೆ ಮಾಡಿತು. ಈ ಅಧಿವೇಶನಕ್ಕೆ ಸ್ಥಳೀಯರು ಹಣ, ಆಹಾರ ಸಾಮಗ್ರಿಗಳು, ತರಕಾರಿಗಳನ್ನು ಜನರು ಧಾರಾಳವಾಗಿ ಕೊಡಲು ಒಪ್ಪಿದರು, ಸ್ವಯಂಸೇವಕರು ಅಧಿವೇಶನಕ್ಕೆ ಮೊದಲೇ ವಿದುರಾಶ್ವತ್ಥಕ್ಕೆ ಬಂದು ಶಿಸ್ತಿನ ಕವಾಯತನ್ನು, ತರಬೇತಿಯನ್ನು ಪಡೆಯಲು ಪ್ರಾರಂಭಿಸಿದರು, ನೂರಾರು ಪ್ರೇಕ್ಷಕರು ಈ ಕವಾಯತನ್ನು ನೋಡಲು ಸುತ್ತಮುತ್ತಲಿನ ಗ್ರಾಮಗಳಿಂದ ಬರುತ್ತಿದ್ದರು. ಇನ್ನೂ ಹೆಚ್ಚಿನ ಸ್ವಯಂಸೇವಕರು ಬಂದು ಇಲ್ಲಿ ಸೇರಬಹುದೆಂದು ಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಯಿತು. ಇಷ್ಟೆಲ್ಲಾ ಸಿದ್ಧತೆಗಳು ಆಗುತ್ತಿದ್ದಂತೆ ಸರ್ಕಾರ ಈ ಸಮ್ಮೇಳನವನ್ನು ವಿಫಲಗೊಳಿಸಲು ಅಧಿವೇಶನಕ್ಕೆ ಸ್ಥಳವನ್ನು ನೀಡಲು ನಿರಾಕರಿಸಿತು. ವಿದ್ಯುತ್ ಅಭಾವದ ಕಾರಣ ನೀಡಿ ವಿದ್ಯುತ್ ಶಕ್ತಿಯನ್ನು ಕೊಡಲು ಸಾಧ್ಯವಿಲ್ಲ ಎಂದಿತು.

ಎನ್.ಸಿ.ನಾಗಯ್ಯರೆಡ್ಡಿ ಅವರು ತಮ್ಮ ಸ್ವಂತ ಜಮೀನಿನಲ್ಲಿದ್ದ ಬೆಳೆಗಳನ್ನು ಕತ್ತರಿಸಿ ಸ್ಥಳಾವಕಾಶವನ್ನು ಕಲ್ಪಿಸಿಕೊಟ್ಟರು. ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ಡೈನಮೋಗಳನ್ನು ತಂದು ಸ್ವತಂತ್ರ ವ್ಯವಸ್ಥೆಯನ್ನು ಏರ್ಪಡಿಸಿ ಕೊಂಡರು.

ಸರ್ಕಾರದ ಅಸಹಕಾರದ ನಡುವೆಯೂ ಸ್ವಾತಂತ್ರ ಹೋರಾಟಗಾರರು ನಿಸ್ವಾರ್ಥ ಸಹಕಾರದಿಂದ ದಿನಾಂಕ ಏಪ್ರಿಲ್ ೧೭, ೧೯೩೯ ರಂದು ವಿದುರಾಶ್ವತ್ಥದಲ್ಲಿ ಎರಡನೇ ಮೈಸೂರು ಕಾಂಗ್ರೆಸ್ ಅಧಿವೇಶನ ಪ್ರಾರಂಭವಾಯಿತು. ಈ ಸಮಾವೇಶದ ಸಿದ್ಧತೆಗಾಗಿ ೩೦೦೦ ಸ್ವಯಂಸೇವಕರು ಹತ್ತು ದಿನಗಳ ಕಾಲ ಎಂ. ದೊರೆಸ್ವಾಮಿಯವರ ನೇತೃತ್ವದಲ್ಲಿ ದುಡಿದರು.ಚಪ್ಪರಕ್ಕೆ ಬೇಕಾದ ಚಾಪೆಗಳನ್ನು ವಾನಿಯಂಬಾಡಿಯಿಂದ ಸರಕು ರೈಲಿನ ಮೂಲಕ ತರಿಸಲಾಯಿತು.ಹತ್ತು ಎತ್ತು ಗಾಡಿಗಳನ್ನು ಬಳಸಿ ಕೊಂಡು ದೂರದ ಸ್ಥಳದಿಂದ ತಂದಿದ್ದ ಎತ್ತರದ ಧ್ವಜ ಸ್ಥಂಭವನ್ನು ನೆಟ್ಟು ಅಲಂಕರಿಸಲಾಯಿತು. ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರು ಹಾಗೂ ಈ ಅಧಿವೇಶನದ ಅಧ್ಯಕ್ಷರಾದ ಹೆಚ್.ಸಿ.ದಾಸಪ್ಪ ಅವರನ್ನು ಅಲಂಕೃತ ಕುದುರೆ ಮೇಲೆ ಕೂರಿಸಿ ಕೊಂಡು ಮೆರವಣಿಗೆಯಲ್ಲಿ ಸಭಾಸ್ಥಾನಕ್ಕೆ ವಿಜೃಂಭಣೆಯಿಂದ ಕರೆತರಲಾಯಿತು.

ಮೊದಲಿಗೆ ಈ ಮಹಾಧಿವೇಶನದ ಸ್ವಾಗತ ಸಮಿತಿ ಅಧ್ಯಕ್ಷರಾದ ಎನ್.ಸಿ.ತಿಮ್ಮಾರೆಡ್ಡಿಯವರು ಮಾತಾನಾಡುತ್ತಾ ಮಹಾತ್ಮಗಾಂಧೀಜಿಯವರು ದೇಶಿಯ ಸಂಸ್ಥಾನಗಳ ಭವಿಷ್ಯ ಸೂತ್ರವನ್ನು ತಮ್ಮ ಕೈಗೆ ತೆಗೆದುಕೊಂಡಿರುವುದು ಆಶಾದಾಯಕವಾಗಿದೆ. ಅದು ನಮ್ಮ ಭಾಗ್ಯೋದಯವೇ ಸರಿ. ಪರಮಾತ್ಮನ ಆಶೀರ್ವಾದದಿಂದ ಮಹಾತ್ಮರ ನೇತೃತ್ವದಲ್ಲಿ ನಮ್ಮ ಗುರಿಯು ಇಷ್ಟರಲ್ಲಿಯೇ ಸಿದ್ಧಿ ಮಾಡಿಕೊಳ್ಳಬೇಕೆಂದು ಹಾರೈಸುತ್ತೇನೆ ಎಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು. ಸುಮಾರು ೫೦ ಸಾವಿರಕ್ಕೂ ಅಧಿಕ ಜನರು ಸೇರಿದ್ದ ಈ ಮಹಾಧಿವೇಶನದ ಅಧ್ಯಕ್ಷರಾದ ಎಚ್.ಸಿ.ದಾಸಪ್ಪನವರು ದೇಶಭಕ್ತರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಿದರು.ನಂತರ ಕಾಂಗ್ರೆಸ್ ಧ್ವಜವನ್ನು ಎತ್ತಿ ಹಿಡಿದರು. ನಂತರ ಇವರು ಕಾಂಗ್ರೆಸ್ಸಿನ ಉತ್ಸಾಹದ ವಾತಾವರಣವನ್ನು ಸಂಸ್ಥಾನದಲ್ಲಿ ಬಲಪಡಿಸಿ ಗಾಂಧೀಜಿಯವರ ವಿಚಾರಗಳನ್ನು ಇನ್ನಷ್ಟು ಪ್ರಚಾರ ಮಾಡಿದರು. ಈ ಆಧಿವೇಶನದಲ್ಲಿ ಮೈಸೂರು ಕಾಂಗ್ರೆಸ್ಸಿನ ಇತಿಹಾಸ, ವಿದುರಾಶ್ವತ್ಥ ಇತಿಹಾಸ, ವಿದುರಾಶ್ವತ್ಥ ದುರಂತ ಮತ್ತು ವೇಪಾ ರಮೇಶಂ ಸಮಿತಿಯ ವರದಿಯನ್ನು, ವಿದುರಾಶ್ವತ್ಥ ಸ್ಮರಣಾ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಪಟ್ಟಾಭಿ ಸೀತಾರಾಮಯ್ಯನವರು ವಸ್ತು ಪ್ರದರ್ಶನವನ್ನು ಉದ್ಘಾಟಿಸಿದರು.

ಇದೇ ಅಧಿವೇಶನದಲ್ಲಿ ಸಮಾಜವಾದಿ ಸಮ್ಮೇಳನ, ಮಹಿಳಾ ಸಮ್ಮೇಳನ ಹಾಗೂ ಹರಿಜನ ಸಮ್ಮೇಳನಗಳು ನಡೆದವು. ಸಮಾಜವಾದಿ ಸಮ್ಮೇಳನವು ಕಮಲಾದೇವಿ ಚಟ್ಟೋಪಾಧ್ಯಾಯ ಅಧ್ಯಕ್ಷತೆಯಲ್ಲಿ ನಡೆಯಿತು. ಸರ್ಕಾರವು ಅವರು ಭಾಷಣ ಮಾಡಬಾರದೆಂದು ನಿಷೇಧಾಜ್ಞೆ ವಿಧಿಸಿದ್ದರು, ಅದನ್ನು ಧಿಕ್ಕರಿಸಿ ಭಾಷಣ ಮಾಡಿದರು.

ಯಶೋಧರಮ್ಮ ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಮಹಿಳಾ ಸಮ್ಮೇಳನದಲ್ಲಿ ಸಾವಿರಕ್ಕೂ ಹೆಚ್ಚು ರೈತ ಮಹಿಳೆಯರು ಮತ್ತು ಇತರ ಸಾವಿರಾರು ಜನರು ಪಾಲ್ಗೊಂಡಿದ್ದರು. ಗಂಗಸಂದ್ರದ ಗೌರಮ್ಮ ಮತ್ತು ಅನ್ನಪೂರ್ಣಮ್ಮತಿಮ್ಮಾರೆಡ್ಡಿ, ಜಯಮ್ಮ.ಡಿ, ಬಳ್ಳಾರಿಸಿದ್ದಮ್ಮ, ಟಿ.ಸುಂನದಮ್ಮ, ಭಾಗೀರಥಮ್ಮ, ಅವರು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಮೂರು ದಿನಗಳ ಕಾಲ ನಡೆದ ಈ ಅಧಿವೇಶನ ಅಭೂತಪೂರ್ವ



ಯಶಸ್ಸನ್ನು ಕಂಡಿತು. ಅಧಿವೇಶನದಲ್ಲಿ ಹಲವಾರು ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ನಡೆಸಿದ ಅವಿರತ ಪ್ರಯತ್ನಗಳಲ್ಲಿ ಮೈಸೂರು ಕಾಂಗ್ರೆಸ್ಸಿನ ವಿದುರಾಶ್ವತ್ಥ ಮಹಾಧಿವೇಶನದ ಪಾತ್ರ ಉಳಿದವುಗಳಿಗಿಂತ ಹೆಚ್ಚಿನದು. ಈ ಅಧಿವೇಶನ ಮುಕ್ತಾಯವಾದ ನಂತರ ಮೈಸೂರು ಸರ್ಕಾರ ಕಾಂಗ್ರೆಸ್ ಸಂಸ್ಥೆಯ ಎಲ್ಲಾ ಕಾರ್ಯಚಟುವಟಿಕೆಗಳನ್ನು ಹತ್ತಿಕ್ಕುವುದಕ್ಕೆ ಪ್ರಯತ್ನಿಸಿತು.ಕಾಂಗ್ರೆಸ್ ಎದೆಗುಂದದೆ ತನ್ನ ಎಲ್ಲಾ ಹೋರಾಟ ಮತ್ತು ಕಾರ್ಯಚಟುವಟಿಕೆಗಳನ್ನು ಶಾಂತಿಯುತವಾಗಿ ಮುಂದುವರಿಸಿ ಕೊಂಡು ಬಂದಿತು.

ವಿದುರಾಶ್ವತ್ಥದಲ್ಲಿ ಎನ್.ಸಿ.ನಾಗಯ್ಯರೆಡ್ಡಿ ಮತ್ತು ಎನ್.ಸಿ.ತಿಮ್ಮಾರೆಡ್ಡಿ ಹಾಗೂ ಅನ್ನಪೂರ್ಣದೇವಿಯವರ ನೇತೃತ್ವದಲ್ಲಿ ಮದ್ಯಪಾನ ನಿಷೇಧ, ಅರಣ್ಯ ಸತ್ಯಾಗ್ರಹ ಚಳುವಳಿಗಳು ೧೯೩೯ ರಲ್ಲಿ ಯಶಸ್ವಿಯಾಗಿ ನಡೆದವು.

ಶಿವಪುರದಲ್ಲಿ ಅಧಿವೇಶನ ನಡೆಯದಂತೆ ತಡೆಯಲು ಸರ್ಕಾರವು ಎಷ್ಟೇ ಪ್ರಯತ್ನಪಟ್ಟರೂ ಅದು ಯಶಸ್ವಿಯಾಯಿತು. ಸರ್ಕಾರದ ಎಲ್ಲಾ ಕ್ರೋಧವು ಕೇಂದ್ರೀಕೃತವಾಗಿ ವಿದುರಾಶ್ವತ್ಥದಲ್ಲಿ ದುರಂತವಾಗಿ ಮೈಸೂರು ಸರ್ಕಾರ ತಲೆತಗ್ಗಿಸುವಂತಾಯಿತು. ಸತ್ಯಾಗ್ರಹಕ್ಕೆ ನಾಂದಿ ಶಿವಪುರದಲ್ಲಾದರೂ ಅದು ಪ್ರಕರಗೊಂಡು ದಿಕ್ಕು ದಿಕ್ಕುಗಳಿಗೆ ವ್ಯಾಪಿಸಿದ್ದು ವಿದುರಾಶ್ವತ್ಥದಿಂದ ಆಯಿತು. ಇದನ್ನು ಅನುಸರಿಸಿದಂತೆ ೧೯೩೯ರ ಸೆಪ್ಟೆಂಬರ್‌ನಲ್ಲಿ ಕೆ.ಜಿ.ಎಫ್ ಚಳವಳಿಯು ಕೆ.ಸಿ.ರೆಡ್ಡಿ ಅವರ ನೇತೃತ್ವದಲ್ಲಿ ನಡೆಯಿತು. ೧೯೪೨ ರ ಆಗಸ್ಟ್ ೮ ರಂದು ಕ್ವಿಟ್ ಇಂಡಿಯಾ ಚಳವಳಿ ನಡೆದು ಹಲವಾರು ನಾಯಕರು ಜೈಲು ಸೇರಿದರು. ಗಾಂಧೀಜಿಯವರ ಬಂಧನವನ್ನು ಪ್ರತಿಭಟಿಸಿ ಚಿಂತಾಮಣಿಯಲ್ಲಿ ಪ್ರಭಾತ್‌ಫೇರಿ, ಬಹಿರಂಗ ಸಭೆ ನಡೆಯಿತು. ಕೆ.ಸಿ.ರೆಡ್ಡಿಯವರನ್ನು ಆಗಸ್ಟ್ ೧೦ ರಂದು ಬಂಧಿಸಿದರು. ಇದೇ ದಿನ ರಾತ್ರಿ ಕೆ,ಸಂಪಂಗಿರಾಮಯ್ಯ, ವೈ.ಆರ್.ಗಂಗಿರೆಡ್ಡಿ, ಬಿ.ಎಲ್.ನಾರಾಯಣಸ್ವಾಮಿ, ಟಿ.ರಾಮಚಾರ್, ಎಂ.ರಾಮಕೃಷ್ಣಯ್ಯ, ದೊರೆಸ್ವಾಮಿ ಇತರರನ್ನು ಬಂಧಿಸಿ ಆಗಸ್ಟ್ ೧೧ ರಂದು ಮುಂಜಾನೆ ಬೆಂಗಳೂರು ಜೈಲಿಗೆ ರವಾನಿಸಿದರು. ಈ ಚಳವಳಿಯು ೧೯೪೨ ರಿಂದ ೧೯೪೩ ರವರೆಗೆ ತೀವ್ರ

ರೂಪದಲ್ಲಿ ನಡೆಯಿತು. ೧೯೪೩ ಜನವರಿ ೨೪ ರಂದು ಕೆ.ಸಿ.ರೆಡ್ಡಿಯವರು ಸೆರಮನೆಯಿಂದ ಹೂರ ಬಂದರು.

## ಮೈಸೂರು ಚಲೋ ಚಳವಳಿ

ದೇಶಾದಾದ್ಯಂತ ಜರುಗಿದ ಸ್ವಾತಂತ್ರ್ಯ ಆಂದೂಲನದ ತೀವ್ರತೆಯಿಂದ ಜರ್ಝರಿತರಾದ ಬ್ರಿಟಿಷರು ೧೯೪೭ ಆಗಸ್ಟ್ ೧೪ ರಂದು ರಾತ್ರಿ ಕಾಂಗ್ರೆಸ್ಸಿಗೆ ಅಧಿಕಾರ ಹಸ್ತಾಂತರಿಸಿ ದೇಶ ಬಿಟ್ಟು ತೊಲಗುವ ಮೂಲಕ ಸ್ವಾತಂತ್ರ್ಯ ಭಾರತವು ೧೯೪೭ ಆಗಸ್ಟ್ ೧೫ ರಂದು ಸೂರ್ಯೋದಯವನ್ನು ಹರ್ಷೋದ್ಗಾರದಿಂದ ಸ್ವಾಗತಿಸಿತು. ೧೯೪೭ ರ ಆಗಸ್ಟ್ ೧೫ ರಂದು ದೇಶಕ್ಕೆ ಸ್ವಾತಂತ್ರ್ಯ ಬಂದಿತಾದರೂ ಮೈಸೂರು ಜನತೆ ಆಶಿಸುತ್ತಿದ್ದ ಜವಾಬ್ದಾರಿ ಸರ್ಕಾರ ಅಸ್ತಿತ್ವಕ್ಕೆ ಬರಲಿಲ್ಲ. ಬದಲಾಗಿ ಸರ್ಕಾರದ ನಿಯಮಗಳು ಇನ್ನೂ ಕಠಿಣವಾದವು. ಕಾಂಗ್ರೆಸ್ ಪುನ; ಸತ್ಯಾಗ್ರಹ ಆರಂಭಿಸಿತು. ಸೆಪ್ಟೆಂಬರ್ ೧ ರಂದು ಮೈಸೂರು ಚಲೋ ಚಳುವಳಿಯನ್ನು ಪ್ರಾರಂಭಿಸಿತು.

ಮೈಸೂರು ಜನತೆ ಆಶಿಸುತ್ತಿದ್ದ ಜವಾಬ್ದಾರಿ ಸರ್ಕಾರ ಎರಡನೇ ಮಹಾಯುದ್ಧ ಪ್ರಾರಂಭವಾದ ಹಿನ್ನೆಲೆಯಲ್ಲಿ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಮೈಸೂರು ಕಾಂಗ್ರೆಸ್ ಸಮಿತಿಯು ಹೊಳೆನರಸೀಪುರದಲ್ಲಿ (ಹಾಸನ ಜಿಲ್ಲೆ) ನಡೆದ ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ತಾತ್ಕಾಲಿಕವಾಗಿ ಕೈಬಿಟ್ಟಿತು. ಬದಲಾಗಿ ಸರ್ಕಾರದ ನಿಯಮಗಳು ಇನ್ನು ಕಠಿಣವಾಗಲಾರಂಭಿಸಿದವು. ತತ್ಪರಿಣಾಮವಾಗಿ ಕಾಂಗ್ರೆಸ್ ಪುನ; ಸತ್ಯಾಗ್ರಹ ಆರಂಭಿಸಿತು.

## ಸೆಪ್ಟೆಂಬರ್ ಒಂದರಂದು ಮೈಸೂರು ಚಲೋ

ಮೈಸೂರು ಪ್ರಾಂತೀಯ ಕಾಂಗ್ರೆಸ್ ಸುಭಾಷ್ ಚಂದ್ರ ಬೋಸ್ ಅವರ ಇಂಡಿಯನ್ ನ್ಯಾಷನಲ್ ಆರ್ಮಿಯ ದಿಲ್ಲಿಚಲೋ ಚಳುವಳಿಯಿಂದ ಪ್ರೇರಿತರಾಗಿ ಮೈಸೂರು ಚಲೋ ಚಳುವಳಿಯನ್ನು ಪ್ರಾರಂಭಿಸಿತು. 'ಆರ್ಕಾಟ್–ಬಾಯ್ಕಾಟ್, ತಂಬುಚೆಟ್ಟಿ–ಚಟ್ಟಕಟ್ಟಿ, ಕೆ.ಸಿರೆಡ್ಡಿಗೆ–ಪಟ್ಟಕಟ್ಟಿ' ಎಂದೆಲ್ಲಾ ಘೋಷಣೆಗಳನ್ನು ಮೊಳಗಿಸುತ್ತಾ ಮತ್ತೊಂದು ಹೋರಾಟಕ್ಕೆ ಜನರು ಸಜ್ಜಾದರು. ಸತತ ೪೨ ದಿನಗಳ ಕಾಲ ಚಳುವಳಿ ನಡೆಯಿತು.



ಪಿ.ರಾಮೇಗೌಡ, ಭಕ್ತರಹಳ್ಳಿಯಬಿ.ವೆಂಕಟರಾಮಪ್ಪ, ಇವರು ಈಚಲು ಮರ ಕಡಿದು ಪಿಕೆಂಟಿಂಗ್ ನಡೆಸಿದರು. ಸೆಪ್ಟಂಬರ್ ತಿಂಗಳಲ್ಲಿ ತಪ್ಪೇನಹಳ್ಳಿಯವರು ಎತ್ತಿಗಾಡಿಯಲ್ಲಿ ಊಟ ತಂದು ನೀಡುತ್ತಿದ್ದಾಗ ಸಿಟ್ಟಿಗೆದ್ದ ಪೋಲೀಸರು ಲಾಠಿ ಪ್ರಹಾರ ನಡೆಸಿದರು. ಗೌರಿಬಿದನೂರು ತಾಲ್ಲೂಕಿನ ೫೬ ವರ್ಷದ ಗೌರಮ್ಮ ಸಂಚಾಲಕಿ ಹಾಗೂ ಜಯಮ್ಮ.ಡಿ ಎಂಬ ಮಹಿಳೆಯರು ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದರು. ಸರ್ಕಾರ ಈ ಅಪರಾಧಕ್ಕಾಗಿ ೨೫ ರೂ. ದಂಡವನ್ನು ವಿಧಿಸಿತು. ದಂಡ ಕೊಡಲು ಅಸಮರ್ಥರಾದ್ದರಿಂದ ಇವರು ಶಿಕ್ಷೆಗೆ ಗುರಿಯಾದರು ಹಾಗೂ ಸುಬ್ಬಮ್ಮ ಜೋಯಿಷ್ ಅವರು ಎಂ.ಎನ್.ಜೋಯಿಷ್‌ರವರನ್ನು ಭೇ ಮಾಡಿದ ನಂತರ ೧೯೪೭ ರ ಮೈಸೂರು ಚಲೋ ಚಳವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದರು.

೧೯೪೭ ಅಕ್ಟೋಬರ್ ೨೪ ರ ವಿಜಯದಶಮಿಯಂದು ಮೈಸೂರು ರಾಜವಂಶಸ್ಥರ ಆಡಳಿತ ಕೊನೆಗೊಂಡು, ಕೆ.ಸಿ.ರೆಡ್ಡಿ ನೇತೃತ್ವದಲ್ಲಿ ಜನಪ್ರಿಯ–ಜವಾಬ್ದಾರಿ ಸರ್ಕಾರ ಅಸ್ಥಿತ್ವಕ್ಕೆ ಬಂದಿತು. ಇದರಿಂದಾಗಿ ಪೂರ್ಣಪ್ರಮಾಣದ ಸ್ವರಾಜ್ಯವೆಂಬ ರಾಜಕೀಯ ವ್ಯವಸ್ಥೆಯ ಹೊಸ ಯುಗವು ಮೈಸೂರು ರಾಜ್ಯದಲ್ಲಿ ಉದಯವಾಯಿತು. ಹೊಸ ರಾಜ್ಯ ರಚನೆಯಾದ ನಂತರ ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡಲಾಯಿತು.ಈ ಘಟನೆಯಿಂದ ಮೊದಲ ಬಾರಿಗೆ ಸ್ವಾತಂತ್ರ್ಯ ಚಳುವಳಿ ಬ್ರಿಟಿಷ್ ಇಂಡಿಯಾದಿಂದ ದೇಶಿಯ ಸಂಸ್ಥಾನಗಳ ಕಡೆ ಹರಿಯಲಾರಂಭಿಸಿತು. ಭಾರತದಾದ್ಯಂತ ಇರುವ ದೇಶಿಯ ಸಂಸ್ಥಾನಗಳ ಜನರು ತಮ್ಮ ಹಕ್ಕುಗಳ ಬಗ್ಗೆ ಜಾಗೃತರಾಗಿ ಜವಾಬ್ದಾರಿ ಸರ್ಕಾರ ಪಡೆಯಲು ಮುಂದಾದರು.

ಒಟ್ಟಾರೆ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿಯ ಕಾವು ತೀವ್ರವಾದುದು ೧೯೩೮ರ ನಂತರ. ಅದರಲ್ಲೂ ವಿದುರಾಶ್ವತ್ಥ ದುರಂತದ ತರುವಾಯವೆನ್ನಬಹುದು. ಅಲ್ಲಿಯವರೆಗೆ ದೇಶೀಯ ಸಂಸ್ಥಾನಗಳ ವಿಷಯದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ತಲೆ ಹಾಕಬಾರದೆಂಬ ಬಲವಾದ ಅಭಿಪ್ರಾಯವನ್ನು

ಹೊಂದಿದ್ದ ಗಾಂಧೀಜಿಯವರು ಏಪ್ರಿಲ್ ೨೫, ೧೯೩೮ರ ವಿದುರಾಶ್ವತ್ಥ ದುರಂತದ ತರುವಾಯ ತಮ್ಮ ಅಭಿಪ್ರಾಯವನ್ನು ಬದಲಾಯಿಸಿ ಕೊಳ್ಳುವಂತೆ ಆಯಿತು. ರಾಷ್ಟ್ರಧ್ವಜದ ಬಗ್ಗೆ ಮೈಸೂರಿನಲ್ಲಿ ನಡೆಯುತ್ತಿರುವ ಚಳವಳಿ ಕಾಲ ಧರ್ಮಕ್ಕೆ ಅನುಗುಣವಾಯಿತು.

ಸರ್ಕಾರವು ತನ್ನ ನಿರಂಕುಶ ವರ್ತನೆಯನ್ನು ಕೈಬಿಟ್ಟು ಮೈಸೂರಿನ ಆಡಳಿತಕ್ಕೆ ಸಾರ್ವಜನಿಕ ಪ್ರತಿನಿಧಿಗಳನ್ನು ಜವಾಬ್ದಾರರನ್ನಾಗಿ ಮಾಡುವುದು ಸೂಕ್ತವೆಂದು ಶ್ರೀಮಾನ್ ಮಹಾರಾಜರಿಗೂ, ಅವರ ಸಲಹೆಗಾರರಾದ ಸರ್ ಮಿರ್ಜಾ ಇಸ್ಮಾಯಿಲ್ ಅವರಿಗೆ ಸೂಚಿಸುತ್ತೇನೆ ಎಂಬ ಸಂದೇಶ ರವಾನಿಸಿ ದೇಶೀಯ ಸಂಸ್ಥಾನಗಳಲ್ಲಿ ಚಳುವಳಿಗೆ ಮಾರ್ಗದರ್ಶನ ಮಾಡುವ ಜವಾಬ್ದಾರಿ ಮಹಾತ್ಮ ಗಾಂಧೀಜಿಯವರು ವಹಿಸಿಕೊಂಡರು. ಹೀಗೆ ವಿದುರಾಶ್ವತ್ಥ ಘಟನೆಯೂ ಮೈಸೂರು ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ಕಿಚ್ಚನ್ನು ಹೊತ್ತಿಸಿ ಚಾಲಕ ಶಕ್ತಿಯಾಗಿ ಪರಿಣಮಿಸಿತು ಎನ್ನುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ.

## ೧೯೩೮ರ ವಿದುರಾಶ್ವತ್ಥ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದವರ ಹೆಸರುಗಳು.

ಎನ್.ಸಿ.ತಿಮ್ಮಾರೆಡ್ಡಿ ನಾಗಸಂದ್ರ, ಎನ್.ಸಿ ನಾಗಯ್ಯರೆಡ್ಡಿ ನಾಗಸಂದ್ರ, ಅನ್ನಪೂರ್ಣದೇವಿ ನಾಗಸಂದ್ರ, ವೆಂಕಟಸ್ವಾಮಿಗೌಡ ಗೋಟಕನಪೂರ, ಟಿ.ರಾಮಾಚಾರಿ ಕೋಲಾರ, ಕೆ.ಟಿ.ಭಾಷ್ಯಂ ಕೋಲಾರ, ಕೆ.ಸಿ.ರೆಡ್ಡಿ ಕ್ಯಾಸಂಬಳ್ಳಿ, ಟಿ.ಸಿದ್ದಲಿಂಗಯ್ಯ ದೊಡ್ಡಬಳ್ಳಾಪುರ, ರುಮಾಲೆಚನ್ನಬಸವಯ್ಯ ದೊಡ್ಡಬಳ್ಳಾಪುರ, ಸುನಂದಮ್ಮ ದೊಡ್ಡಬಳ್ಳಾಪುರ, ಬಿ.ಶ್ರೀನಿವಾಸಮೂರ್ತಿ ಬೆಂಗಳೂರು, ಜ್ವಾಲಾನಯ್ಯ ರಾಮಪುರ, ಶ್ರೀಪಾಲಯ್ಯ ಗೌರಿಬಿದನೂರು, ರಾಮಯ್ಯಶೆಟ್ಟಿ ಗೌರಿಬಿದನೂರು, ಕಲ್ಲೂರುಸುಬ್ಬರಾವ್ ಹಿಂದೂಪುರ, ರಾಮರಾವ್ ಗುಡಿಬಂಡೆ, ಬಾಬುಸಾಬ್ ಗುಡಿಬಂಡೆ, ಪುಟ್ಟಣ್ಣಭಕ್ತರಹಳ್ಳಿ ಶಿಡ್ಲಘಟ್ಟ, ದೊಡ್ಡನರಸಿಂಹಯ್ಯ ಇಡಗೂರು, ಶ್ರೀನಿವಾಸಮೂರ್ತಿ ಚಿಂತಾಮಣಿ, ಸಂಪಂಗಿರಾಮಯ್ಯ ಚಿಕ್ಕಬಳ್ಳಾಪುರ, ಹನುಮಂತಪ್ಪ ಚೌಡಸಂದ್ರ, ಸುನಂದಾದೇವಿ, ಮುನಿಸ್ವಾಮಿ, ನಂಜುಂಡಯ್ಯ, ಅಪ್ಪಸ್ವಾಮಿ, ಟಿ.ಗಂಗಿರೆಡ್ಡಿ, ರಾಮಚಂದ್ರಸ್ವಾಮಿ, ಶ್ರೀಕಂಠಯ್ಯ,



ಸೂರ್ಯನಾರಾಯಣರಾವ್, ಎಸ್.ರಾಮಪ್ಪ, ಎಂ.ವಿ ರಾಮಮೂರ್ತಿ, ಪುಂಡಲೀಕರಾವ್, ಇತರರು.

## ಏಪ್ರಿಲ್ ೧೯೩೯ ರ ಅಧಿವೇಶನದಲ್ಲಿ ಭಾಗವಹಿಸಿದ ಇತರ ಪ್ರಮುಖರು

ಎಚ್.ಸಿ.ದಾಸಪ್ಪ ಮೈಸೂರು, ಯಶೋಧರಮ್ಮದಾಸಪ್ಪ ಮೈಸೂರು, ಕಮಲಾದೇವಿ ಚಟ್ಟೋಪಾಧ್ಯಾಯ ಮಂಗಳೂರು. ಗೌರಮ್ಮ ಗಂಗಸಂದ್ರ, ಡಾಕ್ಟರ್ ಪಟ್ಟಾಭಿಸೀತಾರಾಮಯ್ಯ ಆಂಧ್ರಪ್ರದೇಶ, ಎಂ.ದೊರೆಸ್ವಾಮಿ, ಕೋಲಾರ, ಕೆ.ಪಟ್ಟಭಿರಾಮನ್ ಕೋಲಾರ ಇತರರು.

## ಹತ್ಯಾಕಾಂಡವನ್ನು ವರದಿ ಮಾಡಿದ ಪತ್ರಿಕೆಗಳು

ವಿಶ್ವಕರ್ನಾಟಕ–ಬೆಂಗಳೂರು. ಸಂಯುಕ್ತಕರ್ನಾಟಕ–ಹುಬ್ಬಳ್ಳಿ. ತಾಯಿನಾಡು–ಬೆಂಗಳೂರು. ಸಾಧ್ವಿ–ಮೈಸೂರು. ನವಜೀವನ–ಬೆಂಗಳೂರು. ಕುಮದ್ವತಿ–(ತೆಲುಗು) ಹಿಂದುಪುರ. ಇತರೆ.

## ವಿದುರಾಶ್ವತ್ಥ ಸ್ವಾತಂತ್ರ್ಯ ಸ್ಮಾರಕ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರ್ಥಿಕ ನೆರವಿನಿಂದ ನಾಲ್ಕು ಎಕರೆ ಪ್ರದೇಶದ ಹಸಿರು ಉದ್ಯಾನವನದಲ್ಲಿ ವಿದುರಾಶ್ವತ್ಥ ಸ್ವಾತಂತ್ರ್ಯ ಸಂಕೀರ್ಣವನ್ನು ನಿರ್ಮಿಸಲಾಗಿದೆ. ಸ್ಮಾರಕಗಳು ಉದ್ಯಾನವನದ ಒಂದು ಭಾಗದಲ್ಲಿ ೧೯೩೮ರ ಘಟನೆಯಲ್ಲಿ ಮಡಿದ ಹುತಾತ್ಮರ ನೆನಪಿನ ಸ್ಮಾರಕವನ್ನು ೧೯೭೨ರಲ್ಲಿ ನಿರ್ಮಿಸಲಾಗಿದೆ. ಮತ್ತೊಂದು ಭಾಗದಲ್ಲಿ ವೀರಸೌಧವಿದೆ, ಇದರಲ್ಲಿ ಚಿತ್ರಪಟ ಗ್ಯಾಲರಿ ಮತ್ತು ಗ್ರಂಥಾಲಯವನ್ನು ಆಯೋಜಿಸಲಾಗಿದೆ.

## ಚಿತ್ರಪಟ ಗ್ಯಾಲರಿ.

ಗ್ಯಾಲರಿಯಲ್ಲಿ ೧೦೫ ಚಿತ್ರಪಟಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಸುಮಾರು ೧೮೦ ವರ್ಷಗಳ ಕಾಲ ನಡೆದ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಬೃಹತ್ ಇತಿಹಾಸವನ್ನು ಚಿತ್ರಪಟಗಳ ಮೂಲಕ ಪರಿಚಯಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಸ್ವಾತಂತ್ರ್ಯ ಹೋರಾಟ ಕುರಿತಂತೆ ಕರ್ನಾಟಕದಲ್ಲಿರುವ ಸಂಗ್ರಹಾಲಯಗಳಲ್ಲಿ ಬಹುಶಃ ಇದು ಏಕೈಕ ಅತ್ಯುತ್ತಮ ಗ್ಯಾಲರಿಯಾಗಿದೆ.

ವಿದ್ಯಾರ್ಥಿಗಳು, ಸಂಶೋಧಕರು, ವಿದ್ವಾಂಸರು ಮತ್ತು ಸಾರ್ವಜನಿಕರು ಸಾವಿರಾರು ಸಂಖ್ಯೆಯಲ್ಲಿ ಇಲ್ಲಿಗೆ ಭೇಟಿ ನೀಡುತ್ತಾರೆ. ಗ್ರಂಥಾಲಯದಲ್ಲಿ ಸುಮಾರು ೨೫೦೦ಕ್ಕೂ ಹೆಚ್ಚು ವಿಷಯಾಧಾರಿತ ಪುಸ್ತಕಗಳನ್ನು ಸಂಗ್ರಹಿಸಲಾಗಿದೆ.

## ವೀರ ಲಾವಣಿಗಳು

೧

ಒಂಭೈನೂರ್ ಮೂವತ್ತೆಂಟನೆ ಏಪ್ರಿಲ್
ತಿಂಗಳ ಇಪ್ಪತ್ತೈದರೊಳು ತುಂಬಿರೆ
ಬಹು ಪ್ರಜೆ ಸಂಭ್ರಮದಿಂದಲಿ
ವಿದುರಾಶ್ವತ್ಥ ಜಾತ್ರೆಯೊಳು,
ಸುತ್ತಮುತ್ತಲು ಲಾಠಿ ಹೊಡೆತಗಳ
ಮತ್ತೆ ಗುಂಡಿನ ಏಟುಗಳ್ ಸತ್ತ
ಹೆಣಗಳ
ಲೆಕ್ಕವಿಲ್ಲವು ಹೊತ್ತರೆಷ್ಟೋ
ಗುಪ್ತದೊಳ್".

೨

ಸುತ್ತಮುತ್ತಲು ಲಾಠಿ ಹೊಡೆತಗಳ್ ಮತ್ತೆ ಗುಂಡಿನ ಏಟುಗಳ್
ಸತ್ತ ಹೆಣಗಳ ಲೆಖ್ಖವಿಲ್ಲವು ಹೊತ್ತರೆಷ್ಟೋ ಗುಪ್ತದೊಳ.

೩

ನಿರಾಪರಾಧಿಗಳ್ ಸಂಹಾರ, ಏರಿಸಿ ಗುಂಡನು ಹರಿದಾಕ್ಷಣ
ನೂರಾರು ಕಪಿಗಳು ಭಯಂಕರ, ಕಿರ್ರನೆ
ಕಿರುಚಿತ ಕೊರ್ರೆಂದು ಕೊರಗುತ ಗಿರ್ರೆಂದು ಸತ್ತವು ತರಾತರ.



೪

ಸಿದ್ದಲಿಂಗಯ್ಯನು ಅಧ್ಯಕ್ಷನಾಗಲು ಶಿವಪುರವಾಯಿತು,
ಶೃಂಗಾರ ಸಾರ್ವಜನಿಕರ ಮೇಲೆ ಬಂದೂಕ ಹಿಡಿದವರು,
ನೋಡಲು ಘೋರ ಅಪಾರ,
ಗೌರಮ್ಮ ಎಂಬುವ ಗರ್ಭಿಣಿ ಹೆಣ್ಣನು ಗರ್ವದಿ ಕೊಂದರು ಕೈಯಾರ,
ಸಾರ್ವಜನಿಕರ ಮೇಲೆ ಗುಂಡಿನ ಸುರಿಮಳೆ ಸುರಿದರು.ಘೋರ
ವೈಯಾರ.

### ಶ್ರೀ ಕೆ. ಚೆಂಗಲರಾಯರೆಡ್ಡಿ ಅವರ ಅನಿಸಿಕೆ

೧೨.೧೦.೧೯೪೭ರಂದು ಮೈಸೂರಿನಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯರೆಡ್ಡಿ ಅವರು ಭಾಷಣ ಮಾಡುತ್ತಾ ಹೀಗೆ ತಿಳಿಸಿದರು. ಮೈಸೂರು ಕಾಂಗ್ರೆಸ್ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಅನೇಕ ದಿನಗಳಿಂದಲೂ ಹೋರಾಟ ನಡೆಸಿ ಕೊನೆಗೆ ಅನಿವಾರ್ಯವಾಗಿ ಈ ಸತ್ಯಾಗ್ರಹ ಸಮರವನ್ನು ಹಿಡಿಯಿತು. ಹೀಗೆ ಸುಮಾರು ಒಂದು ತಿಂಗಳ ಹಿಂದೆ ಘೋಷಿಸಲಾದ ಚಲೋ ಮೈಸೂರು ಚಳವಳಿಯು ಯಶಸ್ವಿಯಾಗಿ ನಡೆದು ಮೈಸೂರಿನ ೭೭ ಲಕ್ಷ ಪ್ರಜೆಗಳ ಆಶೋತ್ತರ ಕೈಗೂಡಿದೆ ಇದರಲ್ಲಿ ಸಹಕರಿಸಿದ ಸಂಸ್ಥಾನದ ಒಳಗಿನ, ಹೊರಗಿನ ಪ್ರಜಾವರ್ಗದವರೆಲ್ಲರಿಗೂ ನನ್ನ ಕೃತಜ್ಞತೆಗಳು. ಈ ಸಂದರ್ಭದಲ್ಲಿ ಪೋಲಿಸರ ಹಿಂಸೆಗೆ ಗುರಿಯಾಗಿ ಕಷ್ಟನಷ್ಟಗಳನ್ನು ಹೊಂದಿದವರಿಗೂ ಮತ್ತು ಪ್ರಾಣ ತ್ಯಾಗಮಾಡಿದವರಿಗೂ ಸಂತಾಪ ವ್ಯಕ್ತಪಡಿಸುತ್ತೇನೆ. ಅಲ್ಲದೆ ಮೃತರ ನೆನಪಿಗಾಗಿ ಒಂದು ಶಾಶ್ವತವಾದ ಸ್ಮಾರಕವನ್ನು ಸಹ ನಿರ್ಮಿಸಲಾಗುವುದು. ಮೈಸೂರು ಚಲೋ ಘೋಷಣೆಯನ್ನು ಈಗ ೪೦ ದಿನಗಳ ಹಿಂದೆ ಮಾಡಿ, ಕಳೆದ ತಿಂಗಳು ೪ ನೇ ತಾರೀಕು ದಿನ ನಾವು ಕಾಲ್ನಡಿಗೆಯಲ್ಲಿ ಅರಮನೆಗೆ ಹೋಗಿ ಮಹಾರಾಜರ ಮುಂದೆ ನಮ್ಮ ಬೇಡಿಕೆಗಳನ್ನು ನೀಡಬೇಕೆಂದು ತೀರ್ಮಾನಿಸಿದ್ದೆವು, ಅವರ ಕಿವಿಗೆ ಮುಟ್ಟಲಿಲ್ಲ, ಘೋಷಣೆಗೆ ಮುಖ್ಯ ಕಾರಣವಾಗಿತ್ತು. ಸೆಪ್ಟೆಂಬರ್ ಒಂದನೇ ತಾರೀಕು

ಮೈಸೂರು ಚಲೋ ಘೋಷಣೆಯನ್ನು ಸಾರಿದ ನಂತರ ನಮ್ಮನ್ನು ಮೂರನೇ ತಾರೀಕು ಮಧ್ಯರಾತ್ರಿಯಲ್ಲಿ ದಸ್ತಗಿರಿ ಮಾಡಲಾಯಿತು. ಈಗ ನಮಗೆ ಜಯ ಲಭಿಸಿದೆ.

## ವಿದ್ವಾಂಸರ ಅಭಿಪ್ರಾಯ

ವಿದುರಾಶ್ವತ್ಥದ ಗುಂಡಿನ ದಾಳಿಯು ಮಿರ್ಜಾ–ಪಟೇಲ್ ಒಪ್ಪಂದಕ್ಕೆ ಕಾರಣವಾಯಿತು ಎಂದು ಪ್ರೊ.ಗಂಗಾಧರಮೂರ್ತಿ, ನಿವೃತ್ತ ಪಾಧ್ಯಾಪಕರು, ದಿ ಫಾರ್ಗಟನ್ ಜಲಿಯನ್‌ವಾಲಾ ಬಾಗ್ ಆಫ್ ಸೌತ್ ಇಂಡಿಯಾ ಪುಸ್ತಕದಲ್ಲಿ ಮಾಹಿತಿಯನ್ನು ಬರೆದಿದ್ದಾರೆ. ಆಗಿನ ಮೈಸೂರು ದಿವಾನ್ ಮಿರ್ಜಾ ಇಸ್ಮಾಯಿಲ್ ಮತ್ತು ಭಾರತೀಯ ರಾಜನೀತಿಜ್ಞ ವಲ್ಲಭಭಾಯಿ ಪಟೇಲ್ ನಡುವಿನ ಒಪ್ಪಂದ. ಮೈಸೂರು ರಾಜ್ಯದಲ್ಲಿ ಜನರ ಸಹಭಾಗಿತ್ವದೊಂದಿಗೆ ಮೊದಲ ಸರ್ಕಾರ ರಚನೆ. ಮಹಾತ್ಮಗಾಂಧಿಯವರು ಈ ಘಟನೆಯನ್ನು ಗಮನಿಸಿದರು ಮತ್ತು ಪರಿಸ್ಥಿತಿಯನ್ನು ಅವಲೋಕಿಸಲು ಹಿರಿಯ ಕಾಂಗ್ರೆಸ್ ನಾಯಕರಾದ ಸರ್ದಾರ್ ಪಟೇಲ್ ಮತ್ತು ಆಚಾರ್ಯ ಕೃಪಲಾನಿ ಅವರನ್ನು ನಿಯೋಜಿಸಿದರು. ಇದು ನಮ್ಮ ಇತಿಹಾಸದಲ್ಲಿ ಮಹತ್ವದ ಹೆಗ್ಗುರುತಾಗಿದೆ ಎಂದರು. ರಾಷ್ಟ್ರೀಯ ಧ್ವಜವನ್ನು (ಸ್ವರಾಜ್ ಇಂಡಿಯಾ ಧ್ವಜ) ಹಾರಿಸಲು ಅನುಮತಿ ನೀಡದಿರಲು ಅಧಿಕಾರಿಗಳ ನಿರ್ಧಾರವು ಗುಂಡಿನ ದಾಳಿಗೆ ಕಾರಣವಾಯಿತು. ೧೯೩೦ ರಲ್ಲಿ ಸ್ವಾತಂತ್ರ್ಯಕ್ಕಾಗಿ ದೃಢವಾದ ಪ್ರಯತ್ನವನ್ನು ಮಾಡುವ ಪ್ರಯತ್ನದಲ್ಲಿ ಮೈಸೂರು ರಾಜ್ಯದಲ್ಲಿ ಧ್ವಜವನ್ನು ಹಾರಿಸಲು ನಿರ್ಧರಿಸಿತು.

## ಸಮಾಜಸೇವಕರ, ಸ್ವಾತಂತ್ರ್ಯ ಹೋರಾಟಗಾರರ ಬೀಡು

ವಿದುರಾಶ್ವತ್ಥದಿಂದ ಸುಮಾರು ೫–೬ ಕಿಲೋಮೀಟರ್ ದೂರದ ನಾಗಸಂದ್ರ, ಸ್ವಾತಂತ್ರ್ಯ ಹೋರಾಟಗಾರ ಮತ್ತು ಸಮಾಜಸೇವಕ ಎನ್.ಸಿ.ನಾಗಯ್ಯರೆಡ್ಡಿ ಮತ್ತು ಅವರ ಸೋದರ ಎನ್.ಸಿ. ತಿಮ್ಮಾರೆಡ್ಡಿಯವರ ಹುಟ್ಟೂರು. ಅಲ್ಲಿನ ರೈತಾಪಿ ಜನ ಅಲ್ಲಿ ಭಾರತ ಮಾತಾ ದೇವಸ್ಥಾನವನ್ನು ಕಟ್ಟಿದ್ದಾರೆ. ಪ್ರತಿ ಆಗಸ್ಟ್ ೧೫ ರಂದು, ವಿಶೇಷ ಪೂಜೋತ್ಸವಗಳು, ಜಾನಪದ ಮನರಂಜನೆಯ ಕಾರ್ಯಕ್ರಮಗಳು ಜರುಗುತ್ತವೆ. ಆ ಸಮಯದಲ್ಲಿ ಸತ್ಯಾಗ್ರಹಿಗಳ ಮೇಲೆ ನಡೆಸಿದ ಹಿಂಸಾಚಾರವನ್ನು ನೆನಪು ಮಾಡುವ ಲಾವಣಿಯ ಪ್ರವಚನವೂ ಆಗುತ್ತದೆ.



ಪವನಸುತರು ಬರೆದು ಪ್ರಸ್ತುತಪಡಿಸಿದ ರಾಜಕೀಯ ಧುರೀಣ ಎನ್.ಸಿ.ನಾಗಯ್ಯರೆಡ್ಡಿ ಎಂಬ ಜೀವನ ಚರಿತ್ರೆಯ ಪುಸ್ತಕದಿಂದ ಹೆಕ್ಕಿ ಹಾಡುವ ಲಾವಣಿ, ಅಂದು ಬಹಳ ಪ್ರಸ್ತುತವಾಗುತ್ತದೆ. ಈ ಪುಸ್ತಕಕ್ಕೆ ಮುನ್ನುಡಿಯನ್ನು ಮಾಜಿ ಉಪರಾಷ್ಟ್ರಪತಿ ಶ್ರೀ.ಬಿ.ಡಿ.ಜತ್ತಿಯವರು ಬರೆದಿದ್ದಾರೆ. ಅದರಲ್ಲಿ ಅವರು ದಾಖಲಿಸಿರುವ ಹೆಸರುಗಳು ಕೆ.ಟಿ.ಭಾಷ್ಯಂ, ನಂಜುಂಡಯ್ಯ, ರುಮಾಲೆ ಚನ್ನಬಸವಯ್ಯ, ಟಿ.ರಾಮಾಚಾರ್, ಎಚ್.ಸಿ.ದಾಸಪ್ಪ, ರಾಮಸ್ವಾಮಿ, ನೀಲಕಂಠರಾವ್, ಪಟ್ಟಾಭಿಸೀತಾರಾಮಯ್ಯ, ಅನ್ನಪೂರ್ಣಮ್ಮ, ಎನ್.ಸಿ.ತಿಮ್ಮಾರೆಡ್ಡಿ ಇದರಲ್ಲಿ ಪ್ರಮುಖ ಮುಂದಾಳತ್ವವನ್ನು ರುಮಾಲೆ ಚನ್ನಬಸವಯ್ಯನವರು ವಹಿಸಿಕೊಂಡಿದ್ದರು. ಸ್ವತಃ ಪೇಂಟರ್ ಮತ್ತು ಸೇವಾದಳದ ಸಂಚಾಲಕರಾಗಿದ್ದ ಅವರು, ತಾಯಿನಾಡು, ಕನ್ನಡ ದಿನಪತ್ರಿಕೆಯನ್ನು ೪ ವರ್ಷ ನಡೆಸಿಕೊಂಡು ಬಂದರು. ಕೋಲಾರ ಜಿಲ್ಲೆ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿರುವ ಶ್ರೀಎನ್.ಸಿ.ನಾಗಯ್ಯರೆಡ್ಡಿಯವರು, ವಿದುರಾಶ್ವತ್ಥದಲ್ಲಿ ಸ್ಥಾಪಿಸಿದ "ಸತ್ಯಾಗ್ರಹ ಸ್ಮಾರಕ ಪ್ರೌಢಶಾಲೆ, ಸುತ್ತಮುತ್ತಲ ಹಳ್ಳಿಯ ವಿದ್ಯಾರ್ಥಿಗಳಿಗೆ ವರದಾನವಾಗಿದೆ.

ಜಿ.ನಾರಾಯಣಗೌಡ, ಇವರು ಶ್ರೀನಿವಾಸಪುರ ತಾಲ್ಲೂಕು, ಹೊಗಳಗೆರೆ ಗ್ರಾಮದವರು, ಇವರು ೧೯೩೮ ರ ಶಿವಪುರ ಕಾಂಗ್ರೆಸ್ ಧ್ವಜಾ ಸತ್ಯಾಗ್ರಹದಲ್ಲಿ ಭಾಗವಹಿಸಿ ಮೂರು ದಿನಗಳ ಕಾಲ ಬಂಧನವಾಗಿದ್ದರು. ವಿದುರಾಶ್ವತ್ಥ ಗೋಲಿಬಾರ್‌ನಂತರ ಮೂರು ತಿಂಗಳು ಶಿಕ್ಷೆ ಅನುಭವಿಸಿದ್ದರು. ವಿದುರಾಶ್ವತ್ಥ ಗೋಲಿಬಾರ್ ಅನಂತರ ಮಹದೇವದೇಸಾಯಿ ಮೈಸೂರು ಸಂಸ್ಥಾನಕ್ಕೆ ಬಂದಿರಲು ಮೇಲೂರಿನಲ್ಲಿ ಅವರಿಗೆ ಭಾರೀ ಸ್ವಾಗತ ನೀಡಲಾಯಿತು.೧೯೪೨ ರಲ್ಲಿ ಗಾಂಧೀಜಿಯವರ ಬಂಧನದ ಪ್ರತಿಭಟನಾರ್ಥ ಆಗಸ್ಟ್ ೧೧ ರಂದು ಶ್ರೀನಿವಾಸಪುರದಲ್ಲಿ ನಡೆದ ಸಭೆಯಲ್ಲಿ ಭಾಷಣ ಮಾಡಿದ ಕೆ.ಪಟ್ಟಾಭಿರಾಮನ್, ಕೆ.ಸಂಪಂಗಿರಾಮಯ್ಯ ಮುಂತಾದವರು ಬಂಧಿತರಾದಾಗ ತಪ್ಪಿಸಿ ಕೊಂಡು ಹೋಗಿ ಕೋಲಾರದ ಪಿ.ನಾರಾಯಣರೆಡ್ಡಿ ಅವರನ್ನು ಸಂಪರ್ಕಿಸಿ ಅವರಿಗೆ ವಿದ್ಯಾರ್ಥಿಗಳ ಪ್ರತಿಭಟನಾ ಮುಷ್ಕರವನ್ನು ಸಂಘಟಿಸಲು ಪ್ರೇರೇಪಿಸಿದರು.

ನಂತರ ಬಂಧನ ಆಗಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಹದಿನೆಂಟು ತಿಂಗಳು ಸ್ಥಾನಬದ್ದರಾಗಿದ್ದರು. ೧೯೪೭ರ ಮೈಸೂರು ಚಲೋ ಚಳವಳಿಯ ಕಾಲದಲ್ಲಿ ೪೨ ದಿನಗಳ ಕಾಲ ಸ್ಥಾನಬದ್ದತೆಯಲ್ಲಿ ಇದ್ದರು.೧೯೪೭ ಆಗಸ್ಟ್ ೧೪ ರಂದು ಸಾರ್ವಜನಿಕ ಬಾವಿಯನ್ನು ಹರಿಜನರು ಬಳಸಲು ಸವರ್ಣೀಯರ ಅನುಮತಿಗಾಗಿ ಶ್ರಮಿಸಿದರು. ತಾವು ಸಾರ್ವಜನಿಕ ಬಾವಿಯಿಂದ ನೀರು ಸೇದಿದರೆ ತಮಗೆ ಕೇಡು ಬರುವುದೆಂಬ ಭೀತಿ ಹರಿಜನರ ಮನದಲ್ಲಿ ಇತ್ತು. ಇವರು ಹರಿಜನರಿಗೆ ಧೈರ್ಯ ತುಂಬುವ ಕೆಲಸವನ್ನು ಮಾಡಿದರು.

ಕೆ.ವೆಂಕಟರಾಯಪ್ಪ, ಚಿಕ್ಕಬಳ್ಳಾಪುರ ತಾಲ್ಲೂಕು, ಚಾಮರಾಜಪೇಟೆ ಯವರು, ಇವರು ಗಾಂಧೀಜಿಯವರ ವಿಚಾರಗಳನ್ನು ಪತ್ರಿಕೆಗಳಲ್ಲಿ ಓದಿ ಸ್ವಾತಂತ್ರ್ಯ ಚಳುವಳಿಯ ಕಡೆ ಆಕರ್ಷಿತರಾಗಿ ಎಲ್ಲಾ ಕಡೆ ಧ್ವಜಸತ್ಯಾಗ್ರಹ ನಡೆಸಲು ಕರೆ ನೀಡಿದರು. ಶಿವಪುರ ಕಾಂಗ್ರೆಸ್ ಧ್ವಜಾ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ವಿದುರಾಶ್ವತ್ಥದಲ್ಲಿ ಗೋಲಿಬಾರ್ ಆದ ನಂತರ ಅಲ್ಲಿಂದ ಹಿಂತಿರುಗಿ ಗ್ರಾಮದ ಕೃಷ್ಣ ಟಾಕೀಸ್ ಕಟ್ಟೆಯ ಮೇಲೆ ಧ್ವಜಹಾರಿಸಿ ಬಂಧನಕ್ಕೆ ಒಳಗಾಗಿ ಶಿಕ್ಷೆ ಅನುಭವಿಸಿದರು. ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಇವರು ಇದ್ದಾಗ ಸೆಕ್ಯೂರಿಟಿ ಆಕ್ಟ್ ಪ್ರಕಾರ ಬಂಧನಕ್ಕೆ ವಾರೆಂಟ್ ಇದ್ದು ಇವರು ರಾತ್ರಿ ೧೨ ರಿಂದ ೪ ಘಂಟೆವರೆಗೆ ಸಂಚರಿಸಿ ಯುವಕರನ್ನು ಸ್ವಾತಂತ್ರ್ಯ ಚಳವಳಿಗೆ ಪ್ರೇರೇಪಿಸುವ ಕಾರ್ಯ ಮಾಡಿದರು. ಇವರ ಬಂಧನಕ್ಕಾಗಿ ಸರಕಾರ ೫೦೦ ರೂ.ಬಹುಮಾನವನ್ನು ಘೋಷಿಸಿತ್ತು. ೧೯೪೨ ರ ಚಳವಳಿಯಲ್ಲಿ ಭಾಗವಹಿಸಿ ತಂತಿ, ರೈಲ್ವೆ, ಪೋಸ್ಟ್ ಆಫೀಸಿಗೆ ಹಾನಿ ಮಾಡಿದ್ದರಿಂದ ೦೬–೦೯–೧೯೪೨ ರಂದು ಬಂಧಿಸಿ ೧೩ ತಿಂಗಳು ಬಂಧನಕ್ಕೆ ಒಳಪಡಿಸಿದರು. ೧೯೪೭ ರ ಚಳುವಳಿಯಲ್ಲೂ ಭಾಗವಹಿಸಿದ್ದರು.

ಎ.ಮುನಿಯಪ್ಪ, ಚಿಕ್ಕಬಳ್ಳಾಪುರದವರು, ವೃತ್ತಿಯಲ್ಲಿ ವ್ಯವಸಾಯಗಾರರು. ೧೯೩೮ ರ ಏಪ್ರಿಲ್ ೨೫ ರಂದು ವಿದುರಾಶ್ವತ್ಥದಲ್ಲಿ ರಾಷ್ಟ್ರೀಯ ಧ್ವಜ ಆರೋಹಣ ಮಾಡುತ್ತಿದ್ದಾಗ ಗರ್ಭಿಣಿ ಹೆಣ್ಣು ಮಗಳು ಗೌರಮ್ಮ ಗುಂಡಿಗೆ ಬಲಿಯಾದಳು. ಊರಿನ ಕಾಂಗ್ರೆಸ್ ಮುಖಂಡರಾದ ಕೆ.ವೆಂಕಟರಾಯಪ್ಪ, ಕೆ.ಸಂಪಂಗಿರಾಮಯ್ಯ, ಕೆ.ವೆಂಕಟಕೃಷ್ಣಪ್ಪ, ಸಂಪತ್‌ಕುಮಾರ್, ಯಲದೂರುನರಸಿಂಹಯ್ಯ,



ಎ.ಸಿ.ಹನುಮಂತಪ್ಪ ಇತರರ ಮುಖಂಡತ್ವದಲ್ಲಿ ಧ್ವಜ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಸರ್ಕಾರ ೧೪೪ ನೇ ನಿಷೇಧಾಜ್ಞೆ ಜಾರಿ ಮಾಡಿತು. ಕಾನೂನನ್ನು ಮುರಿದು ಮೂರು ತಿಂಗಳು ಕಾರಾಗೃಹವಾಸ ಅನುಭವಿಸಿದೆ ಎಂದಿದ್ದಾರೆ.

ಶ್ರೀ.ರಾಮಯ್ಯಶೆಟ್ಟಿ, ಗೌರಿಬಿದನೂರು ಜನಪ್ರಿಯರಾಗಿದ್ದ, ಜನಾನುರಾಗಿದ್ದ ಶ್ರೀರಾಮಯ್ಯಶೆಟ್ಟಿ ಅವರ ಬಲಗಣ್ಣು ಹೋಗಲು ವಿದುರಾಶ್ವತ್ಥ ಹೋರಾಟ ಮುಖ್ಯ ಕಾರಣ. ಅರ್ಕಾವತಿ ಬಳಿ ಈಚಲುಮರ ಕಡಿಯುತ್ತಿದ್ದಾಗ ಅವರನ್ನು ಬಂಧಿಸಿ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಅಟ್ಟಲಾಯಿತು. ಅಲ್ಲಿ ಪೊಲೀಸರು ನಡೆಸಿದ ಹಲ್ಲೆಯಿಂದ ಇವರ ಕಣ್ಣು ಹೋಯಿತು. ಪೊಲೀಸರು ಕಣ್ಣು ಕಿತ್ತರೂ ರಾಮಯ್ಯಶೆಟ್ಟಿ ಅವರ ಹೋರಾಟದ ಕೆಚ್ಚು ಆರಲಿಲ್ಲ.

# ಪರಾಮರ್ಶನ ಗ್ರಂಥಗಳು

೧) ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು– ಸಂಪುಟ–೦೨–೧೯೮೮, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.ಬೆಂಗಳೂರು.

೨) ಕರ್ನಾಟಕ ರಾಜ್ಯ ಗ್ಯಾಸೆಟಿಯರ್–ಕೋಲಾರ ಜಿಲ್ಲೆ– ಕರ್ನಾಟಕ ಸರ್ಕಾರ, ೨೦೦೫,

೩) ಕರ್ನಾಟಕ ರಾಜ್ಯ ಗ್ಯಾಸೆಟಿಯರ್–ಕರ್ನಾಟಕ ಸರ್ಕಾರ–೧೯೮೬.

೪) ಮೈಸೂರು ದರ್ಶನ ಸಂಪುಟ–೦೧, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

೫) ವಿದುರಾಶ್ವತ್ಥ–ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ,ಮೈಸೂರು, ೨೦೧೬.


೬) ಮೈಸೂರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು–ಮೈಸೂರು ನಗರ ಮತ್ತು ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘ.ಮೈಸೂರು.೧೯೯೪.

# ಅನುಬಂಧ


## ಛಾಯಾಚಿತ್ರಗಳು





ಚಿಕ್ಕಬಳ್ಳಾಪುರ ಜಿಲ್ಲಾ ಭೂಪಟ




ವಿದುರಾಶ್ವತ್ಥಕ್ಕೆ ಹೋಗಲು ಸಾರಿಗೆ ಸೌಕರ್ಯದ ಭೂಪಟ




ವಿದುರಾಶ್ವತ್ಥ ಘಟನೆ ನಡೆದ ಸ್ಥಳದ ನಕ್ಷೆ



೧೯೩೯ ರಲ್ಲಿ ವಿದುರಾಶ್ವತ್ಥದಲ್ಲಿ ನಡೆದ ಮೈಸೂರು ಕಾಂಗ್ರೆಸ್ ಸಮಾವೇಶ






ರಾಷ್ಟ್ರೀಯ ಸ್ಮಾರಕಕ್ಕಾಗಿ ವಿದುರಾಶ್ವತ್ಥದ ಪವಿತ್ರ ಮೃತ್ತಿಕೆ ಕಳಶವನ್ನು ನೀಡುತ್ತಿರುವ ಶ್ರೀ.ಎನ್.ಸಿ.ತಿಮ್ಮಾರೆಡ್ಡಿ ಮತ್ತು ಅನ್ನಪೂರ್ಣದೇವಿ.



೧೯೩೯ ರಲ್ಲಿ ಎರಡನೇ ಭಾರಿಗೆ ವಿದುರಾಶ್ವತ್ಥದಲ್ಲಿ ನಡೆದ ಮೈಸೂರು ಕಾಂಗ್ರೆಸ್ ಅಧಿವೇಶನಕ್ಕೆ ಅಧಿವೇಶನದ ಅಧ್ಯಕ್ಷರಾದ ಶ್ರೀ.ಹಚ್.ಸಿ.ದಾಸಪ್ಪ ಅವರನ್ನು ಮೆರವಣಿಗೆಯಲ್ಲಿ ಕರೆದೊಯ್ಯುತ್ತಿರುವುದು.



೧೯೩೯ರಲ್ಲಿ ಎರಡನೇ ಭಾರಿಗೆ ವಿದುರಾಶ್ವತ್ಥದಲ್ಲಿ ನಡೆದ ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ಮಹಾರಾಜರ ಒಪ್ಪಂದಂತೆ ಆದ ಎರಡು ಧ್ವಜಗಳನ್ನು ಹಾರಿಸುತ್ತಿರುವ ದೃಶ್ಯ. –ತ್ರಿವರ್ಣ ಧ್ವಜ ಮತ್ತು ಸಂಸ್ಥಾನದ ಧ್ವಜಗಳು.



ಪ್ರಧಾನಮಂತ್ರಿ ಲಾಲ್‌ಬಹದ್ದೂರ್‌ಶಾಸ್ತ್ರಿ ಅವರೊಂದಿಗೆ ಗೌರಿಬಿದನೂರಿನ ಅನ್ನಪೂರ್ಣದೇವಿತಿಮ್ಮಾರೆಡ್ಡಿ




**ವಿದುರಾಶ್ವತ್ಥ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದವರು**



| | | | |
|---|---|---|---|
| ಎನ್.ಸಿ.ನಾಗಯ್ಯ ರೆಡ್ಡಿ– ನಾಗಸಂದ್ರ | ಎನ್.ಸಿ. ತಿಮ್ಮಾರೆಡ್ಡಿ. –ನಾಗಸಂದ್ರ | ಜ್ವಾಲನಯ್ಯ–ರಾಮಪುರ | ಎಂ,ಹನುಮಂತಪ್ಪ.ಮರಳೂರು |
| ನರಸಪ್ಪ– ರಾಮಚಂದ್ರಪುರ | ರಾಮರಾವ್– ಗುಡಿಬಂಡೆ | ರುಮಾಲೆಚನ್ನಬಸವಯ್ಯ– ದೊಡ್ಡಬಳ್ಳಾಪುರ | ಟಿಸಿದ್ದಲಿಂಗಯ್ಯ– ದೊಡ್ಡಬಳ್ಳಾಪುರ |
| ಹೆಚ್.ರಾಮಸ್ವಾಮಿ–ಗೆದರೆ | ಶ್ರೀಪಾಲಯ್ಯ– ಗೌರಿಬಿದನೂರು | ಟಿ.ರಾಮಚಾರ್– ಕೋಲಾರ | ಕೆ.ಚೆಂಗಲರಾಯರೆಡ್ಡಿ– ಕ್ಯಾಸಂಬಳ್ಳಿ |
| ಡಾ.ಬಿ.ಪಟ್ಟಾಬೀರಾಮಯ್ಯ | ಉಪ್ಪಾರಹಳ್ಳಿ ಬಾಬಸಾಹೇಬ– ಗುಡಿಬಂಡೆ | ಕೆ.ಪಟ್ಟಾಭಿರಾಮನ್– ಕೋಲಾರ. | ಗೌರಮ್ಮ–ಗಂಗಸಂದ್ರ |
| ಸಂಗಪ್ಪ–ಮುದುಗರೆ | ಈರಣ್ಣ–ರಾಮಾಪುರ. | ಟಿ.ಚಂದ್ರಣ್ಣ– ಗೌರಿಬಿದನೂರು. | ಗುಣಪಾಲಯ್ಯ–ಮುದುಗರೆ |

**ವಿದುರಾಶ್ವತ್ಥ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದವರು**

| | | | |
|---|---|---|---|
|  ಜಿ.ದಾಸೇಗೌಡ– ಗೌರಿಬಿದನೂರು |  ಪಿ.ಓ.ನಾರಾಯಣಚಾರ್– ಮೇಳ್ಯ |  ಭೂಪಾಲಂಚಂದ್ರಶೇಖರಯ್ಯ ಶಿವಮೊಗ್ಗ |  ಹೆಚ್.ಸಿದ್ದಪ್ಪ– ವೇದಲವೇಣಿ |
|  ತಿರುಮಲೆತಾತಾಚಾರ್ಯ ಶರ್ಮ–ಚಿಕ್ಕಬಳ್ಳಾಪುರ |  ಎಸ್.ವಿ.ಶ್ರೀನಿವಸರಾವ್– ದಾರಿನಾಯಕನಪಾಳ್ಯ |  ಕಮಲದೇವಿ ಚಟ್ಟೋಪಾಧ್ಯಾಯ– ಮಂಗಳೂರು. |  ಕೆ.ಟಿ.ಭಾಷ್ಯಂ– ಕೋಲಾರ |
|  ಕೊಲ್ಲೂರು ಸುಬ್ಬರಾವ್– ಹಿಂದೂಪುರ |  ಹೆಚ್.ಸಿ.ದಾಸಪ್ಪ– ಮೈಸೂರು |  ಯಶೋದಮ್ಮದಾಸಪ್ಪ– ಮೈಸೂರು |  ಚಿಕ್ಕಚೌಡಯ್ಯ– ಈಡಗೂರು |
|  ಹಚ್.ನರಸಿಂಹಯ್ಯ– ಹೊಸೂರು. |  ಎಸ್.ನಿಜಲಿಂಗಪ್ಪ– ಚಿತ್ರದುರ್ಗ |  ಹೆಚ್.ಎಸ್.ದೊರೆಸ್ವಾಮಿ– ಬೆಂಗಳೂರು |  ಆಚಾರ್ಯ ಕೃಪಾಲನಿ– ಆಂದ್ರಪ್ರದೇಶ |
|  ಡಾ.ಎನ್.ಎಸ್. ಹರ್ಡಿಕರ್–ಧಾರಾವಾಡ. |  ಪಿ.ಆರ್.ರಾಮಯ್ಯ– ಬೆಂಗಳೂರು |  ಸರ್ಧಾರ್ ವಲ್ಲಭಾಯಿಪಟೇಲ್– ಗುಜರಾತ್. |  ಅನ್ನಪೂರ್ಣದೇವಿ –ಗೌರಿಬಿದನೂರು |





**ವಿದುರಾಶ್ವತ್ಥದಲ್ಲಿರುವ ಪ್ರಾಚೀನ ಆಶ್ವತ್ಥವೃಕ್ಷ ಎಂದು ಕರೆಯುವ ಸ್ಥಳ**



ವಿದುರಾಶ್ವತ್ಥ ಸ್ವಾತಂತ್ರ್ಯ ಸ್ಮಾರಕ





ಹುತಾತ್ಮರ ನೆನಪಿನ ಸ್ಮಾರಕ

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |

❖ ❖ ❖